Regd No M 1299 Sri ಶಾ 16—10—51

SATYAVADI = 35th Year

ಸತ್ಯವಾದಿ

ಸ್ಥಾಪಕರು- ಅರಮನೆ ಸಿರಸ್ತೆದಾರ್ ಎಂ. ಎ. ಸುಬ್ರಾಯುರು [ಬಿಡಿ ಪ್ರತಿ 3 ಪೈ

ಹಾಕ್ ಬಗೆಗೆ ಲೇಖನ

ಪರ್ಷಿಯಾದ ಖಬೂಂ ಇ ಮಿಲ್ಲಿ ಎಂಬ ವಾರ ಪತ್ರಿಕೆ ಬರೆದ ಲೇಖನದಲ್ಲಿ ಪಾಕಿಸ್ತಾನ ಸ್ವತಂತ್ರವಾದ ರಾಜ್ಯ ವಲ್ಲವೆಂದು ತಿಳಿಸಿದೆ ಸಾಮ್ರಾಜ್ಯ ವಾದವನ್ನು ಏಷ್ಯದಲ್ಲಿ ಮುಂದುವರಿಸಲು ಬ್ರಿಟನ್ ಕುತಂತ್ರದಿಂದ ಈ ರಾಜ್ಯವನ್ನ ಸೃಷ್ಟಿಸಿತೆಂದು ಅದು ತಿಳಿಸಿದೆ.

ಅಂಡಮಾನಿನ ಕೇಳಿಕೆ

ಅಂಡಮಾನಿನ ರಾಷ್ಟ್ರೀಯ ಕಾಂಗ್ರೆಸ್ ಸಮಿತಿ ಭಾರತ ಅಧ್ಯಕ್ಷರಿಗೆ ಮನವಿ ಪತ್ರ ಅರ್ಪಿಸಿ ಹೊಸ ಪಾರ್ಲಿಮೆಂಟಿನಲ್ಲಿ ತಮ್ಮ ದ್ವೀಪಗಳಿಗೂ ಪ್ರಾತಿನಿಧ್ಯ ಕೊಡಬೇಕೆಂದು ತಿಳಿಸಿದೆ.

ಇದೊಂದು ಮುಖ್ಯ ಕೆಲಸ

ಮೊನ್ನೆ ನವದೆಹಲಿಯಲ್ಲಿ ಕಾಂಗ್ರೆಸ್ ಕೆಲಸಗಾರರ ಶಿಕ್ಷಣ ತರಗತಿಯನ್ನು ಪಂ|| ನೆಹರು ಉದ್ಘಾಟನೆ ಮಾಡುತ್ತಾ ಜಾತಿವಾದವನ್ನು ಎದುರಿಸುವದೇ ಭಾರದ ಮುಂದೆ ಈಗಿರುವ ಮುಖ್ಯ ಕೆಲಸವೆಂದು ತಿಳಿಸಿದರು

ತಿರಸ್ಕರಣ

ಭಾರತ ಕಮ್ಯುನಿಸ್ಟ್ ಮುಖಂಡ ಶ್ರೀ ಎ. ಕೆ ಗೋಪಾಲನ್ನರು ಭಾಷಣ ಮಾಡಲು ಕೇಳಿದ ಅನುಮತಿಯನ್ನು ಹೈದರಾಬಾದ್ ಸರ್ಕಾರ ತಿರಸ್ಕರಿಸಿದೆ.

ಹಳ್ಳಿಗರಿಗೆ ಹೇಳಬಯಸಿದ್ದು

ಸರ್ ಎಂ. ವಿಶ್ವೇಶ್ವರಯ್ಯನವರು ಮೊನ್ನೆ ಬೊಂಬಾಯಿನಲ್ಲಿತ್ತ ಹೇಳಿಕೆಯಲ್ಲಿ ಹಳ್ಳಿಗಾಡು ಜನತೆಯು ಕಾರ್ಯತತ್ಪರತೆ ಅಧಿಕಗೊಳ್ಳಿಬೇಕು ಎಂದಿರುವರು

ತಮ್ಮೊಡನೆ ಅವರನ್ನೂ ತಂದರು

ಕಾಂಗ್ರೆಸಿಗೆ ಮಹಾ ಕೋಸಲ ಪ್ರಜಾ ಪಕ್ಷದ ನಾಯಕ ಠಾಕೂರ ನಿರಂಜನ ಸಿಂಗರು ನೂರೈವತ್ತು ಮಂದಿಯೊಡನೆ ಮತ್ತೆ ಹಿಂದಿರುಗಿದರು.

ದಿವ್ಯ ವಾಣಿ

ಧೈರ್ಯದಿಂದ ಜಾಣನಾಗು; ಒಡನೆ ಜಾಣನಾಗು ! ಯೋಗ್ಯ ರೀತಿಯಿಂದ ಜೀವನ ಮಾಡುವ ಕೆಲಸವನ್ನು ಇಂದು ನಾಳೆಯೆಂದು ಮುಂದು ಹಾಕುವವನು ನದಿ ಬತ್ತುವ ವರೆಗೂ ಕಾದು ಆ ಮೇಲೆ ದಾಟುವನೆಂದು ದಂಡೆಯಲ್ಲಿ ಕೂಡುವ ಗಾವಿಲನಂತೆ ಹಾಸ್ಯಾಸ್ಪದನಾಗ ತಾನೆ.

— ಹೊರೇಸ್.

ಬ್ರಿಟ್ ಸೇನೆಯ ಪ್ರವೇಶ

ಬ್ರಿಟಷ್ ಪ್ಯಾರಾಷೂಟ್ ಸೇನೆ ಸೂಯೆಜ್‌ನಲ್ಲಿ ಇಳಿವ ವಾರ್ತೆ ನಿಕೋಸಿಯಾದಿಂದ ಬಂದಿದೆ

ವಿಶೇಷ ಗ್ರಾಂಟು

ಈಜಿಪ್ಟ್ ಸರ್ಕಾರ ಸೆಕ್ಸ್ಪಿಯರನ ಸರ್ವ ನಾಟಕಗಳನ್ನು ಅರಬ್ಬಿ ಭಾಷೆಗೆ ತರ್ಜುಮೆಸಲು ವಿಶೇಷ ಗ್ರಾಂಟು ಕೊಡುವ ತೀರ್ಮಾನಕ್ಕೆ ಬಂದಿದೆ.

೨೦ ನೆ ದಿನಕ್ಕೆ ಹೋಯ್ತು

ಬೆಂಗಳೂರು ಅಡಿಷನಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟಿ ಶ್ರೀ ಬಾಲರತ್ನಂ ಮತ್ತು ಇನ್ನಿಬ್ಬರ ಮೇಲೆ ಹೂಡಿರುವ ಮೊಕದ್ದಮೆ ಇದೇ 20 ನೇ ತಾ|| ಮುಂದಕ್ಕೆ ಹೋಯಿತು

ಪ್ರಾಣಬಿಡುತ್ತಿದ್ದುದು ತಪ್ಪಿತು

25 ವರ್ಷದ ಆರೋಗ್ಯನಾಥನೆಂಬವರು 38 ವರ್ಷದ ಆರೋಗ್ಯ ಮೇರಿ ಎಂಬವರೊಡನೆ ಪ್ರೇಮದಿಂದಿದ್ದು ಮದುವೆಗೆ ಹಿರಿಯರು ಒಪ್ಪದ್ದರಿಂದ ಈರ್ವರೂ ವೈಲುತುತ್ತ ಸೇವಿಸಿ ಪ್ರಾಣ ಬಿಡುತ್ತಿದ್ದುದನ್ನು ಚಿಕಿತ್ಸೆ ನಡೆಯಿಸಿ ತಪ್ಪಿಸಲಾಯಿತೆಂದು ಭದ್ರಾವತಿಯಿಂದ ವರದಿ ಆಗಿದೆ

ಹರಿಜನ ಪ್ರಗತಿ

ಮೇಲ್ಕುಂಡ ಬಾಬ್ತಿಗೆ ಮದರಾಸಿನ ವರ್ಷದ ವೆಚ್ಚ ರೂ. 1ಕಾಲು ಕೋಟಿ.

ಚುನಾವಣಾ ಪಟ್ಟಿ ಬಗೆಗೆ ಕಾಂಗ್ರೆಸಿಗರಲ್ಲಿ ಅಸಂತಪಿ ?

ಮೈಸೂರು ಕಾಂಗ್ರೆಸಿನ ಚುನಾವಣಾ ಪಟ್ಟಿ ಬಗ್ಗೆ ಅನೇಕ ಕಾಂಗ್ರೆಸಿಗರಿಗೆ ಅಸಂತೃಪ್ತಿಯಾಗಿದೆಯೆಂದೂ, ಆ ಬಗೆಗೆ ಅಪೀಲು ಹೋಗುವರೆಂದೂ ತಿಳಿದು ಬಂದಿದೆ ಚಿಕ್ಕಮಗಳೂರಿನ ಕಾಂಗ್ರೆಸ ಕೆಲಸಗಾರರು ಶ್ರೀ ಅಣ್ಣಪ್ಪ ಶೆಟ್ಟರನ್ನು ಸೂಚಿಸಿದ್ದರೂ ಸಮಿತಿ ಶ್ರೀಮತಿ ಸುಬ್ಬಮ್ಮನವರನ್ನು ಆರಿಸಿದ ವರದಿ ಇದೆ

ಪ್ರಮುಖ ಸುದ್ದಿಗಳು

× ಯೋಲಾ ಎಂಬ ಹೆಸರಿನ ನಾಯಿ ಒಟ್ಟಿಗೆ 20 ವರಿಗಳಿಗೆ ಜನ್ಮವಿತ್ತಿದೆ ಈ ನಾಯಿ ಸ್ಪೇನಿನ ಹ್ಯೂಲಲ್ವಾದಲ್ಲಿರುವ ಸಾಂಚೆಜ್' ಎಂಬವರದು

× ಭಾರತ ಸರ್ಕಾರ, ಅಧ್ಯಕ್ಷರಿಗೆ ಪಂಜಾಬಿನ ರೈತ ಸಂದರ್ಶನೆಗಾಗಿ ಶಾಸನ ಜಾರಿ ಮಾಡಲು ಸಲಹೆ ಕೊಡಲಿದೆ

× ದಿನವೂ 4 ಗಂಟೆ ಮಳೆ ಬಿದ್ದಲ್ಲಿ ಉಚಿತ ಭೋಜನ, ವಸತಿ ! ಈ ವಿಮೆಯನ್ನು ಡೆನ್ಮಾರ್ಕಿನ ಹೋಟೆಲಿನವರ್ ಪ್ರಾರಂಭಿಸಿರುವನು

× ತವಿಳು ನಾಡು ಚುನಾವಣೆಯಲ್ಲಿ ದ್ರವಿಡ ಕಜಗಂ ಕಮ್ಯುನಿಸ್ಟರೊಡನೆ ಸಹಕರಿಸುವದೆಂದು ಮುದಲಾಸು ವಾರ್ತೆ

× ಪೂರ್ವ ಪಂಜಾಬಿನ ಹೊಸ ರಾಜಧಾನಿಗೆ ಚಂಡೀಘರ ಎಂಬ ಹೆಸರು ಇಡಬೇಕೆಂದು ಸಲಹಾ ಸಮಿತಿ ಶಿಫಾರಸು ಮಾಡಿದೆ

× ಪ್ರಿಟೋರಿಯ ಹತ್ತಿರದ ಪ್ರಿವಿಯರ್ ವಜ್ರಗಣಿಯಲ್ಲಿ, ಒಂದು, 2 ವರೆ ಅಂಗುಲ ಉದ್ದ, 1 ವರೆ ಅಂಗುಲ ಅಗಲ ಮತ್ತಿಷ್ಟು ಅಂಗುಲ ದಪ್ಪವಿದ್ದ 283 ವರೆ ಕ್ಯಾರೆಟ್ಟು ತೂಕವಿರುವ ಒಂದು ಶ್ರೇಷ್ಠ ತಂಹದ ವಜ್ರ ಸಿಕ್ಕಿದೆ ಇದಕ್ಕೆ ವಜ್ರ ನಿಪುಣರು 1 ಲಕ್ಷದಿಂದ 1 ವರೆ ಲಕ್ಷ ಪೌಂಡುಗಳ ಬೆಲೆ ಅಂದಾಜು ಮಾಡಿದ್ದಾರೆಂದು ಜೊಹಾನ್ಸಬರ್ಗಿನ ವರದಿ ತಿಳಿಸುತ್ತದೆ

× ಕೊರಿಯಾದ 4284 ನೇ ಜನ್ಮದಿನೋತ್ಸವ ವೈಭವದಿಂದ ಆಚರಿಸಲ್ಪಟ್ಟಿತೆಂದು ವಾಷಿಂಗ್ಟನ್ ವಾರ್ತೆ

× ಅಮೇರಿಕದ ಮೂರು ಮುಖ್ಯ ರೈಲ್ವೆಗಳಲ್ಲಿ ಸ್ತ್ರೀಯರು ಮುಖ್ಯಸ್ಥರಾಗಿರುವರು

× ಬೆಂಗಳೂರು ಗುಟ್ಟಹಳ್ಳಿಯಲ್ಲಿ ಘಟ ಸರ್ಪವೊಂದು ಕಂಡುಬಂದು ಅದೃಶ್ಯವಾಗಿ ಆ ಸ್ಥಳದಲ್ಲಿ ಕಲ್ಲುಗಳು ಕಾಣಲ್ಪಟ್ಟವೆ

ಹುಬ್ಬು ಗಾಳಿ

ಪೂರ್ವ ಗೋಲಾರ್ಧದಲ್ಲಿ ದುಂದು ಗಾರಿಕೆಯು ವಿಲಾಸ ಪ್ರಿಯತೆಗಾಗಿ ಹೆಸರಾಂತರಂದವರೆಂದರೆ ರಾಜಮಹಾರಾಜರು ಸಂಸ್ಥಾನಿಕರು ಅವರ ಪ್ರಣಯವಿಹಾರಗಳ ಕತೆಗಳಂತೂ ಅದ್ಭುತ ರೋಮಾಂಚಕಾರಿ ಕಾದಂಬರಿಗಳನ್ನು ಮೀರುತ್ತವೆಯೆಂದರೆ ಅತಿಶಯೋಕ್ತಿಯೇನಿಲ್ಲ ಮುನ್ನೆ ಮುನ್ನೆ ಇಂಥ ಪ್ರಕರಣವೊಂದು ಯುರೋಪ ಖಂಡದಲ್ಲಿ ನಡೆಯಿತು. ಅದು ಹೀಗಿದೆ —

ಈಜಿಪ್ತದ ಅರಸು ಫರೂಕ, ತನ್ನ 2 ನೆಯ ಲಗ್ನದ ಹದಿನೇಳನೆ ಹುಡುಗಿ ರಾಣಿ ನರಿಮಾನ್ ಎಂಬ ಮದುಮಗಳೊಡನೆ ಯುರೋಪು ಖಂಡದಲ್ಲಿ ಹನಿಮೂನ್ ಪ್ರಣಯ ವಿಹಾರವನ್ನು 5 ತಿಂಗಳ ವರೆಗೆ ಮಾಡಿದರಂತೆ

ಈ 5 ತಿಂಗಳಲ್ಲಿ ಅವರ ವೆಚ್ಚದ ಸರಾಸರಿಯು ಪ್ರತಿ ದಿನಕೆ ಇಪ್ಪತ್ತು ಸಾವಿರ ರೂಪಾಯಿಯಂತೆ ಇತ್ತಂತೆ

ಅವರ ಈ ಪ್ರಯಾಣದಲ್ಲಿ ಜತೆಗಿದ್ದ ಗಂಟು ಗದಡಿಗಳ ತೂಕ 20 ಟ್ರಕ್‌ಗಳು

ಒಂದು ಸಂಜೆ ಈ ಹದಿನೇಳರ ಹುಡಿಗೆ ರಾಣಿ ಪೇಟೆಗೆಂದು ಹೊರಟು ಒಂದೇ ಸಲಕ್ಕೆ 25 ಗೌನುಗಳನ್ನು (ಅವುಗಳ ಬೆಲೆ ರೂ 330000 !) ಕೊಂಡಳಂತೆ

ಸ್ವಿಡ್ಸರಲಂಡದ ಒಂದು ಹಾಟೇಲಿದಲ್ಲಿ ಏಕಾಂತಬೇಕೆಂದು ಅಲ್ಲಿ ಕಟ್ಟಿಸಲಾದ ಅಡ್ಡ ಗೋಡೆಗೆ 16 ಸಾವಿರ ರೂ ವೆಚ್ಚಮಾಡಲಾಯಿತಂತೆ ಅಲ್ಲಿ ಅವರು ಕಳೆದುದು ಒಂದೇ ರಾತ್ರಿಯಂತೆ !

ಹೀಗಿದೆ ಈ ನರೋತ್ತಮರ ಹುಚ್ಚು ಗಾಳಿ

× ಬೊಂಬಾಯಿ ಲಾಯಿಡ್ಸ್ ಬ್ಯಾಂಕಿನ ದರೋಡೆ ಖಟ್ಲೆಯಲ್ಲಿ ಮುಖ್ಯ ಆರೋಪಿಯಾದ ಅನೋಖಿಲಾಲನ ಹೆಂಡತಿಯಾದ ಕಮಲಾ ಅನೋಖಿಲಾಲಳನ್ನು ಹೈಕೋರ್ಟಿನ ನ್ಯಾಯಾಧೀಶರು ಕಾಲು ಲಕ್ಷ ರೂ ಜಾಮೀನು ಮತ್ತು ಅಷ್ಟೇ ಹಣದ ಇಬ್ಬರು ಜಾಮೀನುದಾರರನ್ನು ಒಪ್ಪಿಕೊಂಡು ಅವಳನ್ನು ಜಾಮೀನಿನ ಮೇಲೆ ಬಿಡಬೇಕೆಂದು ಅಜ್ಞೆ ಇತ್ತರು

ಸಂವುಟ ೧೦ ಸಂಚಿಕೆ ೮ · ॥ ಶ್ರೀ ॥ ತಾ॥ 15-10-1951

— ಪ್ರ ಬೋ ಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೃಷ್ಣಾನಂದ ಮಹಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧೆಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ. ಸ್ವ. ಸಂಘ

ಶ್ರೀ ಚಂದ್ರಮೌಳೀಶ್ವರ ಮಹೋತ್ಸವ

ಡಾಕೋರ್ ಅ 8— ಶ್ರೀ ಚಂದ್ರಮೌಳೀಶ್ವರ ಮಹೋತ್ಸವವು ನಿನ್ನೆ ಅತ್ಯಂತ ವಿಜೃಂಭಣೆಯಿಂದ ಪ್ರಾರಂಭವಾಯಿತು: ಯಜ್ಞಮಂಟಪವೂ ಸಭಾಮಂಟಪವೂ ಪತಾಕೆಗಳಿಂದ ಶೃಂಗರಿಸಲ್ಪಟ್ಟಿದ್ದವು; ಪ್ರಾತಃಕಾಲದಲ್ಲಿ ಬ್ರಾಹ್ಮಣರು ವೇದಮಂತ್ರಗಳನ್ನು ಪಠಿಸಲು ಪ್ರಾರಂಭಿಸಿದರು; ಸಮಾರಂಭದಲ್ಲಿ ಭಾಗವಹಿಸಲು ಭಾರತದ ಮಹಾ ಸಂತರಾದ ಶ್ರೀ ಸ್ವಾಮಿ ಕರಪಾತ್ರಜೀಯವರು ಮಧ್ಯಾಹ್ನ ಆಗಮಿಸಿದರು. ಮತ್ತು ಸಾರ್ವಜನಿಕರಿಂದ ಅಶ್ವಾದಿಯಿಂದ ಸ್ವಾಗತಿಸಲ್ಪಟ್ಟರು. ಸಾಯಂಕಾಲ ಪ್ರಚಂಡ ಸಭೆಯು ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ರಾಮನಾಥ ವಕೀಲರು ಚಿಕ್ಕದಾದ ಸುಮಧುರ ಸ್ವಾಗತ ಭಾಷಣವನ್ನಾಡಿ, ಅದನ್ನು ಡಾಕೋರು ಮಹಾಜನರ ಪರವಾಗಿ ಶ್ರೀ ದಯಾಭ್ಯಾಯಂವರು ಸಮರ್ಥಿಸಿದರು. ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳವರು ಸ್ವಾಮಿ ಕರಪಾತ್ರಜೀಯವರ ವಿಷಯವಾಗಿ ಆಂದವಾದ ಭಾಷಣ ಮಾಡಿದರು. ಶ್ರೀ ಜಗದ್ಗುರುಗಳು ಹೇಗೆ ಸರಕಾರದ ನೀತಿಯಿಂದ ಸಾರ್ವಜನಿಕರು ಎಲ್ಲ ವಿಷಯಗಳಲ್ಲಿಯೂ ಪೀಡಿಸಲ್ಪಡುತ್ತಿರುವದೆಂಬುದನ್ನೂ ಇದನ್ನು ತಪ್ಪಿಸಿ, ಭಾರತೀಯ ಸಂಸ್ಕೃತಿಯನ್ನು ಕಾಪಾಡುವ ಸಲುವಾಗಿ ರಾಮರಾಜ್ಯ ಪರಿಷತ್ತು ಸ್ಥಾಪಿಸಲ್ಪಟ್ಟಿರುವ ವಿಷಯವನ್ನು, ಮತ್ತು ಡೆಲ್ಲಿಯಲ್ಲಿ ಹೇಗೆ ಸತ್ಯಾಗ್ರಹ ನಡೆಯುತ್ತಿರುವುದೆಂಬುದನ್ನು, ಸತ್ಯಾಗ್ರಹಿಗಳು ಎಂತಹ ಅನುಚಿತ ಉಪಚಾರಕ್ಕೊಳಗಾಗಿರುವರೆಂಬುದನ್ನು ತಾವು ಬೇಕಾದಂತೆ ಮಂತ್ರಿಗಳಿಗೆ ಹಿಂದೂಕೋಡು ಹೇಗೆ ಭಾರತೀಯ ಸಂಸ್ಕೃತಿಯು ಒಡಕ್ಕೆ ಕೊಡಲಿ ಪ್ರಾಯವಾಗಿರುವುದೆಂಬುದನ್ನು ನಿಶ್ಚಯಪಡಿಸಿ ಕೊಡಲು ಸಿದ್ಧರಿರುವೆನೆಂದೂ ಆದಕ್ಕೆ ಕರಪಾತ್ರಜೀಯವರ ಮೇಲೂ ಮತ್ತಿತರರ ಮೇಲೂ ತೀವ್ರ ಲಾಠಿಚಾರ್ಜು ಮಾಡಲಾಯಿತೆಂದೂ, ಹೃದಯಂಗಮವಾದ ಸ್ಫೂರ್ತಿದಾಯಕವಾದ ತಮ್ಮ ಭಾಷಣದಲ್ಲಿ ವಿವರಿಸಿದರು ಹಿಂದೂಕೋಡು ಮಸೂದೆಯ ಮೇಲೆ ಪ್ರತಿಭಟನೆ ವ್ಯಕ್ತಪಡಿಸಲು ಸಾರ್ವಜನಿಕರು ರಾಮರಾಜ್ಯ ಪರಿಷತ್ತಿಗೆ ಸೇರಿ ರಾಮರಾಜ್ಯಪರಿಷತ್ತಿಗೆ ಮಹಾ ಚುನಾವಣೆಯಲ್ಲಿ ಓಟು ಕೊಡಬೇಕೆಂದು ತಿಳಿಸಿದರು. ಕರಪಾತ್ರಿ ಮಹಾರಾಜಕಿ ಜೈ ಜಯಘೋಷಣೆಯೊಡನೆ ಸ್ವಾಮಿಯವರು ಈ ದಿನ ಬೆಳಿಗ್ಗೆ ಡಾಕೊರಿನಿಂದ ತೆರಳಿದರು. ಮಹೋತ್ಸವವೂ ಮಹಾರುದ್ರ ಯಜ್ಞವೂ ಏಳು ದಿನಗಳು ನಡೆಯುವುವು. ತಾ॥ 10 ನೆಯ್ದು 11 ರಲ್ಲಿ ಧರ್ಮ ಸಮ್ಮೇಳನವೂ ಸೇರುವುದು.

ಡಾಕೋರು ಅ 9— ಡಾಕೋರಿನಲ್ಲಿ ಚಂದ್ರಮೌಳೀಶ್ವರ ಮಹೋತ್ಸವ ಸಂಬಂಧದಲ್ಲಿ 2 ನೇ ದಿನದ ಕಾರ್ಯಕಲಾಪ ಹೇರಳವಾಗಿದ್ದವು. ಬೆಳಿಗ್ಗೆ ಶ್ರೀ ಕರಪಾತ್ರಜಿಸ್ವಾಮಿಗಳ ಸಾರ್ವಜನಿಕ ಬೀಳ್ಕೊಡುವಿಕೆ ಏರ್ಪಾಡಾಗಿತ್ತು; ಮಧ್ಯಾಹ್ನ ಸಮಾರಂಭಗಳಲ್ಲಿ ಭಾಗವಹಿಸಲು ಮತ್ತು ಯಜ್ಞ ದರ್ಶನಕ್ಕಾಗಿ ಸಂಸ್ಥಳಗಳಿಂದ ಒಹು ಮಂದಿ ಆಗಮಿಸಿದ್ದರು ಸಂಜೆ ಭಾರಿ ಸಭೆ ನಡೆಸಲ್ಪಟ್ಟು, ಅಹಮದಾಬಾದಿನ ನರ್ಮದ ಶಂಕರರು ತಮ್ಮ ಆನಂದದಾಯಕ ಶೈಲಿಯಲ್ಲಿ, ಭವ್ಯರಸಭರಿತವಾದ ತಮ್ಮ ಕವಿತೆ ಭಾಷಣಗಳಿಂದ ಸಭಿಕರನ್ನು ಆನಂದಿಸಿದರು. ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳವರ, ಸಭಿಕರನ್ನು ಕುರಿತು, ಏನೇ ಆದರೂ ಧರ್ಮವನ್ನು ಆಚರಿಸಬೇಕೆಂದೂ, ಮತ್ತು ಧರ್ಮವಿದ್ದೆಡೆ ವಿಜಯ [illegible] ದೆಂದೂ, ಧರ್ಮಾಚರಣೆಯಿಂದ ಲೋಕೋತ್ತರ ಕಾರ್ಯ ಸಾಧಿಸಬಹುದೆಂದೂ ತಿಳಿಸಿ ಜನರು ರಾಮರಾಜ್ಯ ಪರಿಷತ್ತಿಗೆ ಸೇರಿ ಅದರ ಉಮೇದುವಾರರಿಗೇ ಓಟು ಕೊಡಬೇಕೆಂದರು.

ಶ್ರೀ ಚಂದ್ರಮೌಳೀಶ್ವರ ಮಹೋತ್ಸವದ ಪರಿಸಮಾಪ್ತಿ

ಡಾಕೋರು, ಅ 12— ನಿನ್ನೇ ದಿವಸ ಮಹಾರುದ್ರ ಯಜ್ಞದ ಪೂರ್ಣಾಹುತಿ ನಡೆದು, ಶ್ರೀ ಚಂದ್ರಮೌಳೀಶ್ವರ ಮಹೋತ್ಸವವು ಪರಿಸಮಾಪ್ತಿಗೊಂಡಿತು. ಪಶ್ಚಿಮ ಭಾರತದ ಅನೇಕ ಕಡೆಗಳಿಂದ ದರ್ಶನಕ್ಕಾಗಿ ಜನರು ಸಾವಿರಗಟ್ಟಲೆ ಸೇರಿದ್ದರು. ಸಾಯಂಕಾಲ ಪೂರ್ಣಾಹುತಿ ಮುಗಿದನಂತರ, ಧರ್ಮ ಸಂಮೇಳನವು ಜರುಗಿತು; ದೊಡ್ಡದೊಡ್ಡವರಿಂದ ಬಂದಿದ್ದ ನೂರಾರು ಸಂದೇಶಗಳು ಓದಲಾಯಿತು: ಪಶ್ಚಿಮ ಭಾರತ ಮತ್ತು ಡಾಕೋರಿನ ನಾಗರೀಕರ ಪರವಾಗಿ ಶ್ರೀ ಟಿ. ತಾಂಬೇಕರರಿಂದ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳವರಿಗೆ ಸನ್ಮಾನಪತ್ರ ಅರ್ಪಿಸಲಾಯಿತು; ಹೊರಊರಿನ ಪ್ರಮುಖ ವಿದ್ವಾಂಸರುಗಳು ಸ್ವಾಮಿ ಅಚಯುತಾನಂದ ರಾಂಜೀ, ಪ್ರೊ॥ ದುರ್ಕಾಲ್, ಜೋಷಿ ಗಿರಿಜಾ ಶಂಕರ್, ಕವಿ ನರ್ಮದಾಶಂಕರ್, ಶಾಸ್ತ್ರಿ ಚಂದ್ರಶೇಖರ್, ಈಂತಾಲ್ ಠಾಕೂರು ಸಾಹೇಬ್ ಮತ್ತು ಅನೇಕಾನೇಕರು ಭಾಷಣಮಾಡಿದರು. ಶ್ರೀಯುತ ಗುಣವಂತಲಾಲ್ ಆಚಯರವರು ತಮ್ಮ ಹಾವಭಾವಗಳಿಂದಲೂ ವಿನೋದಪೂರ್ಣ ಭಾಷಣದಿಂದಲೂ ಸಭಿಕರನ್ನು ಆನಂದಗೊಳಿಸಿದರು. ಶ್ರೀ ಮಂಜುಲಾಲ್ ದಾವೆಯವರ ನಿಸ್ವಾರ್ಥ ಸೇವೆಯ ಬಗ್ಗೆ ಶ್ರೀ ಜಗದ್ಗುರುಗಳವರು ಉನ್ನತ ಮಾತುಗಳನ್ನಾಡಿ ಅವರಿಗೆ ನ್ಯಾಯವಿದ್ವತ್ ಭಾಸ್ಕರ ಎಂಬ ಪ್ರಶಸ್ತಿಪತ್ರವನ್ನು ಸ್ವರ್ಣಪದಕದೊಡನೆ ಅನುಗ್ರಹಿಸಿದರು. ಪ್ರೊ॥ ದೂರ್ಕಾಲ್, ಶಾಸ್ತ್ರಿ ಅನುರೂಪ್ ರಾಂಜೀ, ಈಂತಾಲ್ ಠಾಕೂರ್ ಸಾಹೇಬ್, ಶ್ರೀ ತಂಬೇಕರ್ ರಾಂಲಾಲ್ ವಕೀಲ್, ಶಾಸ್ತ್ರಿ ಚಂದ್ರಶೇಖರ್, ಮತ್ತಿತರ ಅನೇಕರಿಗೆ ವಿವಿಧ ಬಿರುದುಗಳು ಕೊಡಲಾಯಿತು. ಶ್ರೀ ಶಂಕರ ಭಾಗತರು ಸಭಿಕರನ್ನು ಮನೋರಂಜಕ ಮತ್ತು ಬೋಧಪ್ರದ ಭಜನೆಯಿಂದ ಸಂತೋಷಗೊಳಿಸಿದರು. ಶ್ರೀ ಚಂದ್ರಮೌಳೀಶ್ವರರ ಆಶ್ರಯದಲ್ಲಿ ಜನರೆಲ್ಲರೂ ಸಂಘಟಿತರಾಗಬೇಕೆಂದೂ ಮತ್ತು ರಾಮರಾಜ್ಯದ ಮೂಲಕ ಭಾರತೀಯ ಸಂಸ್ಕೃತಿಯನ್ನು ಕಾಪಾಡಲು ಸಂಪೂರ್ಣ ಪ್ರಯತ್ನ ಮಾಡಬೇಕೆಂದೂ; ಜಗದ್ಗುರುಗಳವರು ತಿಳಿಸಿ ಆಶೀರ್ವದಿಸಿದರು. ಸಾರ್ವಜನಿಕರು ಉತ್ಸಾಹದಿಂದ ಭಾಗವಹಿಸಿದ ವೈಭವ ಅಭಿವ್ಯಕ್ತಸ್ನಾನ ಮೆರವಣಿಗೆಯೊಂದಿಗೆ ಮಹೋತ್ಸವವು ಪರಿಸಮಾಪ್ತಿಗೊಂಡಿತು.

ಡಾಕೋರ್, ಅ 11— ಶ್ರೀ ಚಂದ್ರಮೌಳೀಶ್ವರ ಮಹೋತ್ಸವದ 3 ನೆ ದಿವಸದ ಕಾರ್ಯಕಲಾಪ ಮೊನ್ನೆ ಡಾಕೋರು ನಾಗರೀಕರಿಂದ ಅತ್ಯಂತ ವೈಭವದಿಂದ ನೆರವೇರಿಸಲ್ಪಟ್ಟಿತು. ಹೊರದೇಶದ ಜನರು ಶ್ರೀ ಮಹಾರುದ್ರ, ಶಕ್ತಿಮಾತ ಮತ್ತು ಜಗದ್ಗುರುಗಳವರ ದರ್ಶನ ಪಡೆದರು. ಸಾಯಂಕಾಲ ನಡೆದ ಭಾರಿ ಸಭೆಯಲ್ಲಿ ವಕೀಲ್ ದೀನನಾಥ್ ಮತ್ತಿತರರು ಭಾಷಣ ಮಾಡಿದರು ಜನರು ಶಕ್ತಿ ಮಾತೆಯನ್ನು ಪೂಜಿಸಬೇಕೆಂದೂ, ರಾಮರಾಜ್ಯಕ್ಕೆ ಬೆಂಬಲವೀಯಬೇಕೆಂದೂ ಜಗದ್ಗುರುಗಳವರು ಮಾಡಿದ ಅಮೋಘ ಭಾಷಣದಲ್ಲಿ ತಿಳಿಸಿದರು.

ಮಹೋತ್ಸವದ ಕಾರ್ಯಕಲಾಪಗಳ 4 ನೇ ದಿವಸವಾದ ನಿನ್ನೆ ಅಂಗವಾಗಿ ಶೃಂಗರಿಸಲ್ಪಟ್ಟಿದ್ದ ಪಲ್ಲಕ್ಕಿಯಲ್ಲಿ ಶ್ರೀ ಚಂದ್ರಮೌಳೀಶ್ವರ ಮಹಾದೇವನ ಉತ್ಸವವು ರಾಜಬೀದಿಗಳಲ್ಲಿ ವಿಜೃಂಭಣೆಯಿಂದ ನಡೆಯಿತು. ಜೊತೆಯಲ್ಲಿ ಚಪ್ಪಾಳೆ ಭಜನೆಯವರೂ, ಸನ್ಯಾಸಿಗಳೂ ಮತ್ತಿತರರೂ ನೆರೆದಿದ್ದರು ಮತ್ತೊಂದು ಪಲ್ಲಕ್ಕಿಯಲ್ಲಿ ಶ್ರೀ ಜಗದ್ಗುರುಗಳು ಆಸನಾರೂಢರಾಗಿದ್ದರು. ರಸ್ತೆಗಳಲ್ಲಿ, ಮನೆಯ ಕಿಟಕಿಗಳಲ್ಲಿ, ಬಿಸಿಲು ಮುಚ್ಚಿಗಳ ಮೇಲೆ ಜನರು ಕಿಕ್ಕಿರಿದು ಸೇರಿದ್ದು, ದರ್ಶನಲಾಭ ಪಡೆದು ಅತ್ಯಾನಂದಭರಿತರಾದರು.

ನಾಲ್ಕು ಗಂಟೆಗಳ ಕಾಲ ನಡೆದ ಈ ವೈಭವ ಉತ್ಸವದಲ್ಲಿ ದಾರಿಯುದ್ದಕ್ಕೂ ಪೂಜೆಗಳು, ಮಂಗಳಾರತಿಗಳು ನಡೆದು ಕಾಣಿಕೆಗಳು ಅರ್ಪಿಸಲಾಗುತ್ತಿದ್ದಿತು.

ಸಾಯಂಕಾಲ ಶ್ರೀ ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ಧರ್ಮಸಮ್ಮೇಳನವು ನಡೆದು ಸಹಸ್ರಾರು ಜನರು ಭಾಗವಹಿಸಿದ್ದರು, ವಿದ್ವಾಂಸರಾದ ಮಹಾ ಪಂಡಿತರ ಭಾಷಣಗಳು ನಡೆದವು. ಅನೇಕ ವಿನೋದಾವಳಿಗಳೂ ಇದ್ದುವು. ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳು ಭಾಷಣಗಳ ಸಾರಾಂಶ ತಿಳಿಸಿ ಧರ್ಮಶಾಸ್ತ್ರಗಳ ಆಧಾರವಿತ್ತು, ಜನರು ಧರ್ಮಮಾರ್ಗವನ್ನನುಸರಿಸಬೇಕೆಂದೂ ತಿಳಿಸಿದರು. ರಾತ್ರೆ ಭಜನೆ ನಡೆಯಿತು ಮಹಾರುದ್ರ ಪೂರ್ಣಾಹುತಿಯು ಇಂದು ನಡೆಯಿತು. ಸಂಮೇಳನವು ನಡೆಯುವುದು.

SHAKTI SUDHA

A Superb Tonic

ದಿವ್ಯವಾಣಿ

ಐಶ್ವರ್ಯಕ್ಕೆ ಒಳ್ಳೆಯತನ, ಪರಾಕ್ರಮಕ್ಕೆ ಹಂಟದಿರುವುದು, ತಿಳುವಳಿಕೆಗೆ ಸೌರಣೆ ಸದ್ವಂಶದಲ್ಲಿ ಹುಟ್ಟಿದುದಕ್ಕೆ ವಿನಯ, ಧನಕ್ಕೆ ದಾನ, ತಪಸ್ಸಿಗೆ ಶಾಂತಿ ಬಲಕ್ಕೆ ಪರಿ ಅಪರಾಧವನ್ನು ಮನ್ನಿಸುವುದು, ಧರ್ಮಕ್ಕೆ ಫಲಾಕಾಂಕ್ಷೆ ಇಲ್ಲದಿರುವುದು ಭೂಷಣ; ಇವೆಲ್ಲಕ್ಕೂ ಕಾರಣವಾದ ಶೀಲ ಉತ್ತಮ ಭೂಷಣ.

— ಸುಭಾಷಿತ

ಕನ್ನಡಿಗನ ಪ್ರಾರ್ಥನೆ

ಕನ್ನಡ ಮಹಾಲಕ್ಷ್ಮೀ, ತಾಯಿ ರೇಣುಕೆ ಜಗದಂಬೆ ನಮೊ ಎಂಬೆ!
ಬನವೆ ತಿಂತಿಣಿಗಟ್ಟಿ ನಿನ್ನ ಪಾದಕ್ಕೆ
ಉಧೋ ಉಧೋ ಎನ್ನುತಿದೆ!
ಹೃದಯ ತುಂಬಿ ಹಬ್ಬಿರುವ ತಮವ
ಕಳೆಯೆ!
ಮುದವ ತುಡುವ ಆತ್ಮಜ್ಯೋತಿಯನು
ಬೆಳಗೆ!
ತುಳಿದು ಕ್ರುದ್ಧರನು, ಎತ್ತು ಬಡಬಡ್ಡರನು
ಸಿದ್ಧಬುದ್ಧರನು ಹುಟ್ಟಿಸೇಳು, ಎಲೆ
ತಾಯಿ!
ಓ ಮಹಾಸರಸ್ವತಿಯೆ, ಶೃಂಗೇರಿ ಶಾರದೆ
ಯೆ
ಶೃಂಗಗಿರಿ ಇಳಿದು ಬಾ ತಾಯಿ ಕನ್ನಡದ
ದೇವಿ
ಲೆಕ್ಕಣಿಕೆ ಬಿಟ್ಟೆಂದು ಕೂರಿಸಿಯ ಕೊಡು
ತಾಯಿ
ನಮ್ಮಲಸ ವಿಲಾಸವನು, ಭೋಗಪ್ರಾಹ
ವನು
ನೀಗಿಸಮ್ಮ ತ್ಯಾಗಯೋಗವನೊರೆದು
ಓ ಮಂತ್ರ ಮಾತೆ, ಶಕ್ತಿದಾತೆ, ನಾವು
ಬರಿ ಯಂತ್ರಗಳು, ನೀನು ಯಂತ್ರಾ
ರೂಢೆ
ಸಮ್ಮ ನಿಯಂತ್ರಿಸು, ತಾಯಿ ಬ್ರಹ್ಮಾಣಿ!

[ಶ್ರೀ ದೊಡ್ಡವೇಟೆ ಅಂದಾನಪ್ಪ ನವರು ರಚಿಸಿರುವ 'ಪ್ರಾರ್ಥನೆ' ಯ ೫ ನುತ್ತು ೬ ನೇ ಪದ್ಯಗಳಿವು]

ಕ್ಷಯರೋಗ ನಿವಾರಣೆ

(ಪಂಡಿತ ಕೆ. ಪಿ ಪುರಾಣಿಕ)

ಭಾರತದ ಆರೋಗ್ಯ ಮಂತ್ರಿಗಳು ರೇಡಿಯೋ ಭಾಷಣವನ್ನು ಮಾಡುತ್ತಾ ಕ್ಷಯ ರೋಗ ನಿವಾರಣಾ ಕಾರ್ಯದಲ್ಲಿ ಸರಕಾರದವರು ತೀವ್ರ ಆಸಕ್ತಿಯಿಂದ ಇರುವುದಾಗಿಯೂ, ಬಿ ಸಿ ಜಿ ಚುಚ್ಚುವುದು ಕ್ಷಯ ರೋಗದ ಆಸ್ಪತ್ರೆಗಳನ್ನು ಹೆಚ್ಚಿಸುವುದು ಇತ್ಯಾದಿ ಕಾರ್ಯಕ್ರಮಗಳು ನಡೆಯುತ್ತಿವೆಯೆಂದೂ ಹೇಳಿದರು ಜನಗಳ ರೋಗ ನಿವಾರಣಾ ಕಾರ್ಯದಲ್ಲಿ ಸರಕಾರದವರು ಆಸಕ್ತಿ ವಹಿಸದೇ ಹೋದರೆ ಇನ್ಯಾರು ಮಾಡಬೇಕು!

ಜನಗಳು ಬಡತನದಿಂದ ನರಳುತ್ತಾ ಇದ್ದು ಸಾಕಷ್ಟು ಸರಿಯಾದ ಆಹಾರ ವಿಲ್ಲದಿರುವುದರಿಂದಲೂ, ಕಾಫಿ, ಟೀ, ಸಿನಿಮಾ ಇತ್ಯಾದಿಗಳ ದುಃಭ್ಯಾಸವು ಜನಗಳಲ್ಲಿ ಹೆಚ್ಚುತ್ತಾ ಇರುವುದರಿಂದಲೂ ಪಾಶ್ಚಾತ್ಯ ಚಿಕಿತ್ಸಾ ಪದ್ಧತಿಯು ಪ್ರಭಾವವಾಗಿಯೂ ಭಾರತದಲ್ಲಿ ಕ್ಷಯರೋಗವು ಬೆಳೆಯುತ್ತಾ ಬಂದಿದೆ; ಆ ರೋಗದ ನಿವಾರಣೆಗೆ ಮುಖ್ಯ ಕಾರಣಗಳನ್ನು ಪರಿಹರಿಸುವುದು ಅಗತ್ಯವೇ ಹೊರತು ಬಿ ಸಿ ಜಿ ಚುಚ್ಚುವುದರಿಂದಾಗಲೀ, ಆಸ್ಪತ್ರೆಗಳನ್ನು ಹೆಚ್ಚಿಸುವುದರಿಂದಾಗಲೀ ಕ್ಷಯ ರೋಗ ನಿವಾರಣೆಯು ಫಲಕಾರಿಯಾಗದು; ಮೂಲ ಕಾರಣಗಳನ್ನು ನಿವಾರಣೆ ಮಾಡಿದರೆ ಆಸ್ಪತ್ರೆಗಳಿಗೂ ವ್ಯಾಕ್ಸಿನ್‌ಗಳಿಗೂ ಹಣವನ್ನು ನೆಚ್ಚಬೇಕಾಗಿಲ್ಲ.

ಕೇಂದ್ರ ಆರೋಗ್ಯ ಮಂತ್ರಿಗಳು ಇಂಗ್ಲೆಂಡಿನಲ್ಲಿದ್ದಾಗ ಅಲ್ಲಿಯ ಔಷಧ ನಿರ್ಮಾಪಕರೆಲ್ಲರೂ ಸೇರಿ ಮಂತ್ರಿಗಳಿಗೊಂದು ಸತ್ಕಾರ ಕೂಟವನ್ನು ಮಾಡಿದರು; ಅವರು ತಯಾರಿಸಿದ ಔಷಧಗಳಿಗೆಲ್ಲಾ ಗಿರಾಕಿಗಳನ್ನು ಮಾಡಿಕೊಡುವುದಾಗಿ ನಮ್ಮ ಮಂತ್ರಿಗಳು ಭರವಸೆಯನ್ನಿದ್ದಾರೆ; ಅದುದರಿಂದ ಭಾರತದ ಜನಗಳ ಕ್ಷಯ ರೋಗ ನಿವಾರಣೆಯಲ್ಲಿ ತೀರ್ವಾಸಕ್ತಿ ಹುಟ್ಟಿದೆ.

ಕಾಶ್ಮೀರವನ್ನು ಎರಡು ಭಾಗವಾಗಿ ಮಾಡಬೇಕು?

ಪ್ರಮುಖ ಸುದ್ದಿಗಳು

ನವದೆಹಲಿಯಲ್ಲಿ ಭಾರತ ನಿಮ್ನ ವರ್ಗದ ಅಧ್ಯಕ್ಷ ರಾಜಭೋಜರು ಹೇಳಿಕೆ ಇತ್ತು, ಕಾಂಗ್ರೆಸ್ ರಾಜ್ಯಭಾರದಿಂದ ಆಗಿರುವ ರಾಷ್ಟ್ರದ ಅಧೋಪತನವನ್ನು ತಡೆಯಲು ತಮ್ಮ ಪಕ್ಷ ಕಾರ್ಯೋನ್ಮುಖವಾಗುವದೆಂದಿರುವರು.

ಹೈದರಾಬಾದಿನಲ್ಲಿ ಫಕ್ರೂ-ಜಿಕ್ರಾ ಇ-ಹಿಂದಿನ ಅಧ್ಯಕ್ಷ ಅಕ್ಬರ್ ಖಾನರು ಮೊನ್ನೆ ಹೇಳಿಕೆಯಿತ್ತು, ಪಠಾಣರ ಪ್ರಗತಿಗೆ ಸ್ವತಂತ್ರ ಪಠಾಣಿಸ್ಥಾನ ಅಗತ್ಯವೆಂದಿರುವರು

ಬೆಂಗಳೂರಿನಲ್ಲಿ ಮೊನ್ನೆ ಮೊನ್ನೆ ಸೆರೆ ಸೌದೆ ಸಾಗಿಸಿಕೊಂಡು ರಾತ್ರಿವೇಳೆ ರಹದಾರಿಯಿಲ್ಲದೆ ಲಾರಿ ಓಡಿದ್ದನ್ನು ಪೋಲೀಸರು ಪತ್ತೆ ಮಾಡಿದ್ದಾರೆ ಅದೆ ಲಾರಿಯಲ್ಲಿ ಸೌದೆ ಇಲಾಖೆಯ ಇಬ್ಬರು ಕೆಳಸಿಬ್ಬರು ಕುಳಿತಿದ್ದರಂತೆ!

ಬೆಂಗಳೂರು, ಕೋಲಾರ, ತುಮಕೂರು ಜಿಲ್ಲಾಧಿಕಾರಿಗಳನ್ನು ಮಹಾರಾಜರು ಕರ್ನಾಟಕ ಪರಿಸ್ಥಿತಿ ಕುರಿತು ಚರ್ಚಿಸಿ, ಸೂಕ್ತ ಪರಿಹಾರ ಒದಗಿಸಬೇಕೆಂದು ತಿಳಿಸಿದರು

ಚುನಾವಣಾ ಘೋಷಣೆ

ಅಖಿಲ ಭಾರತ ನಿಮ್ನ ವರ್ಗ ಸಂಸ್ಥೆ ಚುನಾವಣಾ ಘೋಷಣೆ ಪ್ರಕಟಿಸಿದೆ. ಹಿಂದೂಗಳು ಹೆಚ್ಚಿರುವ ಭಾಗವನ್ನು ಹಿಂದೂಗಳಿಗೂ, ಮುಸ್ಲಿಮರು ಹೆಚ್ಚಾಗಿರುವ ಭಾಗವನ್ನು ಪಾಕಿಸ್ತಾನಕ್ಕೂ ಕಾಶ್ಮೀರವನ್ನು ವಿಭಜಿಸಿ ಹಂಚಬೇಕೆಂದೂ ಆ ಸಂಸ್ಥೆ ಒತ್ತಾಯಮಾಡಿದೆ ಆ ಸಂಸ್ಥೆ ಪಾಕದ ಪ್ರತಿಬಂಧಕವನ್ನು ವಜಾ ಮಾಡುವದಾಗಿ ತಿಳಿಸಿದೆ.

ಒಪ್ಪಂದ ರದ್ದು

ಬ್ರಿಟಿಷ್-ಈಜಿಪ್ಷಿನ ಒಡಂಬಡಿಕೆಯನ್ನು ಈಜಿಪ್ಟು ರದ್ದುಗೊಳಿಸಿದ್ದರ ವಿಷಯದಲ್ಲಿ ಈಜಿಪ್ಷಿನ ಜನತೆ ತೀವ್ರ ಆನಂದ ಭರಿತರಾಗಿರುವರು. ಕೈರೋ ಮತ್ತಿತರ ಸ್ಥಳಗಳಲ್ಲಿ ಶಾಂತಿಭಂಗವಿಲ್ಲದೆ ಪ್ರದರ್ಶನಗಳಾದವು.

ಸಮಾನ ಸ್ಥಾನ

ಮಧ್ಯಪ್ರಾಚ್ಯದ ರಕ್ಷಣಾ ವ್ಯವಸ್ಥೆಯಲ್ಲಿ ಈಜಿಪ್ಟಿಗೆ ಸರಿಸಮಾನ ಸ್ಥಾನ ಕಲ್ಪಿಸುವದಾಗಿ ಕೈರೋ ವಾರ್ತೆ.

ಶಾಸನ ಸಭೆ

ಮೈಸೂರು — ಶಾಸನ ಸಭೆಯ 2 ನೇ ದಿನದ ಕಾರ್ಯಕಲಾಪಗಳು ಕ್ಯಾಫರ್ಡ್ ಭವನದಲ್ಲಿ ಈ ಮಧ್ಯಾಹ್ನ 12 ಗಂಟೆಗೆ ಪ್ರಾರಂಭವಾಯಿತು.

— ವಿಶ್ವ ಕುಟುಂಬಿ ಬಾಪೂ —

ಬಾಪು ವಿಶ್ವಕುಟುಂಬಿಯಾಗಿದ್ದರು: ಅವರಿಗೆ ಎಲ್ಲರೂ ಬೇಕು; ಎಲ್ಲವೂ ಬೇಕು; ಅವರ ವ್ಯವಹಾರ ನಿತ್ಯ ಶತಾವಧಾನವಿದ್ದಂತೆ. ಹತ್ತು ನಿಟ್ಟಿಗೆ ದಶರಥ ಚಕ್ರವರ್ತಿ ತನ್ನ ರಥ ಓಡಿಸುತ್ತಿದ್ದನಂತೆ; ಅದೂ ಒಂದು ಸಾಮರ್ಥ್ಯವೇ. ಬಾಪೂ ಕೋಟಿ ದಿಕ್ಕಿನಲ್ಲಿ ತನ್ನ ಮನಸ್ಸನ್ನು ಹರಿಸುತ್ತಿದ್ದರು: ಕೋಟಿ ಸಂಬಂಧ ಬೆಳೆಸುತ್ತಿದ್ದರು; ಅವರು ದಿನ ಬೆಳಗಾಗ ಗಾಳೀ ಸಂಚಾರ ಹೊರಡುತ್ತಿದ್ದರು: ಅವರ ಹಿಂದೆ ಅಗಡ ಹತ್ತಾರು ಮಂದಿ ಇರುತ್ತಿದ್ದರು ದಿನವೂ ಪ್ರಪಂಚದ ನಾನಾ ಮೂಲೆಗಳಿಂದ ಜನ ನೋಡಲು ಬರುತ್ತಿದ್ದರು; ಒಬ್ಬೊಬ್ಬರದು ಒಂದು ಸಮಸ್ಯೆ; ಎಲ್ಲರಿಗೂ ಸಾವಧಾನವಾದ ಸಮಾಧಾನ ಹೇಳುತ್ತಿದ್ದರು.

ಹಿಂದೆ ಒಮ್ಮೆ ಚೀನಾ ದೇಶದ ಪ್ರತಿನಿಧಿಯಾಗಿ ತೈ ಚಿ ತೌ ಸೇವಾಗ್ರಾಮಕ್ಕೆ ಬಂದಿದ್ದರು; ಗಾಂಧೀಜಿ ಅವರಿಗೂ ಅವರೊಡನೆ ಬಂದಿದ್ದವರಿಗೂ ಖಾದೀ ಅಹಿಂಸೆ ಸಂದೇಶಗಳನ್ನು ಹೇಳಿದರು; ಹೊರಟು ಬರುವಾಗ ತೈ ಚಿ ತೌ ಗಾಂಧೀಜೀಗೆ ದೀರ್ಘಾಯುವನ್ನು ಕೋರಿದರು.

'ಚೀನದ ಯೋಗಕ್ಷೇಮಕ್ಕಾಗಿ, ಹಿಂದೂಸ್ಥಾನದ ಯೋಗಕ್ಷೇಮಕ್ಕಾಗಿ ನಿಮಗೆ ದೀರ್ಘಾಯುವಿರಲಿ ಎಂದು ಬೇಡುತ್ತೇನೆ' ಎಂದರು.

ಗಾಂಧೀಜೀ ನಗುತ್ತಾ 'ನನ್ನ ಕುಟುಂಬ ದೊಡ್ಡದು: ೩೫ ಕೋಟಿ ಜನರಂತೆ' ಎಂದರು ತೈ ಚಿ ತೌ ಮುಂದುವರಿಸಿ 'ಏಕೆ, ಇಡೀ ಮಾನವ ಕೋಟಿಯೇ ನಿಮ್ಮ ಕುಟುಂಬ' ಎಂದರು.

'ನಿಜ, ಈ ೩೫ ಕೋಟಿ ಕುಟುಂಬದ ಯೋಗಕ್ಷೇಮವನ್ನು ನಾನು ಹೊರೆಯಲ್ಲೆನಾದರೆ, ನೀವು ಹೇಳಿದಹಾಗೂ ಆದೀತು' ಎಂದರು ಗಾಂಧೀಜೀ.

ಗಾಂಧೀಜಿಯ ಉದಾತ್ತ, ಹಿರಿಯ ಮನಸ್ಸು ಎಲ್ಲೆ ವಿಸ್ತರಿಸುದಾಗಿತ್ತು, ಅವರ ಪ್ರೀತಿ ವಿಶ್ವವ್ಯಾಪ್ತಿಯಾಗಿತ್ತು.

— ಶುಭ

ಮೈಸೂರು ವರ್ತಮಾನ

ಸಿಲೋನಿನವರಿಂದ ಉಪದೇಶ ಭಾಷಣ

ಸಿಲೋನ್ ವಿಶ್ವವಿದ್ಯಾನಿಲಯದ ಉಪ-ಕುಲಪತಿಯವರಾದ ಸರ್ ಐವಾನ್ ಜೆಂಕಿನ್ಸ್‌ರನ್ನು ಡಿಸೆಂಬರ್ ತಿಂಗಳಿನಲ್ಲಿ ನಡೆಯುವ ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಭಾಷಣ ಮಾಡಲು ಆಹ್ವಾನಿಸಲಾಗಿದೆ

— ಮೈಸೂರು ದಸರಾ ವಸ್ತುಪ್ರದರ್ಶನ ತಾ|| 21 ನೇ ಭಾನುವಾರ ಸಮಾಪ್ತವಾಗಲಿದೆ.

ಅವಕಾಶಹೀನರಿಗೆ ಹಿತೋಕ್ತಿ

ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಕೆ ಹನುಮಂತಯ್ಯನವರು ಪತ್ರಿಕೆಯವರೊಂದಿಗೆ ಮಾತನಾಡಿ ತ್ಯಾ, ಮಹಾ ಚುನಾವಣೆಗೆ ಅಂಗೀಕೃತರಾಗದ ಅರ್ಜಿದಾರರು ನಿರಾಶರಾಗದೆ ಕಾಂಗ್ರೆಸಿನ ಗೆಲುವಿಗೆ ಬೆಂಬಲ ಕೊಡಬೇಕೆಂದು ತಿಳಿಸಿದ್ದಾರೆ

— ನಿನ್ನೆ ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷರು ಚುನಾವಣಾ ಪಟ್ಟಿಯೊಡನೆ ದೆಹಲಿಗೆ ಹಾರಿದರು. ಸಂಗಡ ಕಾಂಗ್ರೆಸಿನ ಸಹ ಕಾರ್ಯದರ್ಶಿ ಶ್ರೀ ಹುಚ್ಚು ಮಾಸ್ತಿಯವರಿದ್ದಾರೆ.

Kann. (Eng. 478)

ನ್ಯೂಗಿನಿಯಾದಲ್ಲಿ ಕುಷ್ಟರೋಗ

ಉಷ್ಣವಲಯದಲ್ಲಿ ಅನೇಕಾನೇಕ ಅಪಾಯಕರ ಖಾಯಿಲೆಗಳು ಆಗಿಂದಾಗ್ಗೆ ಬರುವುದು ಸರ್ವಸಾಧಾರಣವಾಗಿದೆ : ಈ 20 ನೇ ಶತಮಾನದಲ್ಲಿ, ಔಷಧ ವಿಜ್ಞಾನವು ಅಷ್ಟು ಅಭಿವೃದ್ಧಿಗೊಂಡಿರುವ ಈ ಯುಗದಲ್ಲಿ, ಅನೇಕ ದೇಶದೇಶಗಳಲ್ಲಿ ಇನ್ನೂ ಹಲವಾರು ಸಾಂಕ್ರಾಮಿಕ ಜಾಡ್ಯಗಳು ಹೇರಳವಾಗಿವೆ.

ಮಾನವನಿಗೆ ಬರಬಹುದಾದ ಅತಿ ಕೀಳು ಜಾಡ್ಯವಾದ ಕುಷ್ಟರೋಗವು ಬಹುಕಾಲದಿಂದಲೂ ಇರುವುದು. ಈ ರೋಗವು ಅತಿ ಸಾಂಕ್ರಾಮಿಕವಾಗಿದ್ದು ಅದರಿಂದ ನರಳುವವರು ಇತರರಿಂದ ಪ್ರತ್ಯೇಕವಾಗಿ ವಾಸಿಸಬೇಕಾದಷ್ಟು ಭಯಂಕರವಾಗಿದೆ. ನ್ಯೂಗಿನಿಯಾದ ತೀರವ ಒಂದು ಸಣ್ಣ ದ್ವೀಪದಲ್ಲಿ ಇಂತಹ ಐವತ್ತು ಮಂದಿ ವಾಸಿಸುತ್ತಿದ್ದಾರೆ ; ಈ ದ್ವೀಪದಲ್ಲಿ ಕೇವಲ ಒಬ್ಬರೇ ಒಬ್ಬರು ಆರೋಗ್ಯಶಾಲಿಗಳಿರುವರು ; ಅವರ್ಯಾರೆಂದರೆ, ಮಾನವನನ್ನು ಹಿಂಸಿಸುತ್ತಿರುವ ಈ ಭಯಂಕರ ವ್ಯಾಧಿಯಿಂದ ನರಳುತ್ತಿರುವ ರೋಗಿಗಳಿಗೆ ಔಷಧೋಪಚಾರ ನಡೆಸಲು ಇರುವ ಒಬ್ಬ ಯುವಕ ಡಾಕ್ಟರು

ಮಾನವ ಸೇವೆಗೆ ತಮ್ಮ ಜೀವವನ್ನು ಧಾರೆ ಎರೆಯುತ್ತಿರುವವರು ಇವರೊಬ್ಬರೇ ಅಲ್ಲ ; ಆತನ ಹಿಂದೆ ಎಷ್ಟೋ ಮಂದಿ ಇದ್ದರು ; ಮತ್ತು ಇಂದು ಅನೇಕ ವಿಜ್ಞಾನಿಗಳು ಸಾಂಕ್ರಾಮಿಕ ರೋಗಗಳನ್ನು ಕಾಶಮಾಡಲು ತಮ್ಮ ಜೀವಿತವನ್ನು ಕಳೆಯುತ್ತಿರುವರು

ವರ್ಷಾಕಾಲದ ಸಂಶೋಧನೆಯಲ್ಲಿ ಕ್ವಿನೈನು ಮೂಲಕ ಮಲೇರಿಯಾವನ್ನು ಎದುರಿಸುವುದೊಂದಾಗಿದೆ : ಈ ಕಾರ್ಯಕ್ರಮವು ಎಲ್ಲ ಉಷ್ಣ ಪ್ರದೇಶಗಳಲ್ಲಿ ಆಚರಿಸಲಾಗುತ್ತಿದೆ.

ಈ ಸಂದರ್ಭದಲ್ಲಿ, 1938 ರಲ್ಲಿ ಮಾಜಿ ಲೀಗ್ ಆಫ್ ನೇಷನ್ಸಿನ ನಿಪುಣ ಮಲೇರಿಯಾ ಕಮಿಷನ್ನಿನ ವರದಿಯು ಅವಶ್ಯವಾದುದಾಗಿದೆ. ಮಲೇರಿಯಾ ಕಾಲದಲ್ಲಿ ಪ್ರತಿ ದಿನ 6 ಗ್ರೇನು ಕ್ವಿನೈನು ಮತ್ತು ಮಲೇರಿಯಾ ತಗುಲಿದಾಗ 5-7 ದಿನಗಳು 15 ರಿಂದ 20 ಗ್ರೇನು ಕ್ವಿನೈನು ಸೇವನೆಯು ಪರಿಣಾಮಕಾರಿಯಾದ ಮಲೇರಿಯಾ ಪ್ರತಿಬಂಧಕವೂ, ಔಷಧವೂ ಆಗಿರುವುದೆಂದು ಈ ವಿಶೇಷ ವಿಜ್ಞಾನಿಗಳು ನಿರ್ಧರಿಸಿದ್ದಾರೆ.

ಅಪೇರ—
ಅಮೋಘ 3 ನೇ ವಾರ
ಸರ್ವಾಧಿಕಾರಿ
ಮಹೋನ್ನತ ತಮಿಳು ಚಿತ್ರ
ಪಾತ್ರ — ಅಂಜಲಿದೇವಿ, ನಾಗಯ್ಯ, ರಾಮಚಾರ್ಯುಲು, ಸಂಬಿಯಾರ್
ಪ್ರತಿ ದಿನ 3 ಆಟಗಳು
ಬೆಳಗಿನ ಪ್ರದರ್ಶನ 19-10-51 ರಿಂದ
ಸಿಂಗಾರ್ (ಹಿಂದಿ)

ರಣಜಿತ್
ಕೀರ್ತಿಯುತ 3 ನೇ ವಾರ
ಶಬಿನ್ತಾನ್
ಮನಮೋಹನ ಹಿಂದಿ ಚಿತ್ರ
ಪಾತ್ರ: ಶ್ಯಾಂ, ಸಸೀಂ, ಸಪ್ರೂ, ಕಕ್ಕೂ
ಪ್ರತಿ ದಿನ 3 ಆಟಗಳು

ಸತ್ಯವಾದಿ
ದಿನಪತ್ರಿಕೆ ತಿಂಗಳಿಗೆ 6 ಆಣೆಗಳು

ಈಗ ಯಶಸ್ವಿಯಾಗಿ ನಡೆಯುತ್ತಿದೆ — ಪ್ರತಿ ದಿನ 3 ಆಟಗಳು
ಚಾಮುಂಡೇಶ್ವರಿ ಮತ್ತು ಗಣೇಶ ಟಾಕೀಸುಗಳಲ್ಲಿ
ಸುಖಸಂಪತ್ ಚಿತ್ರಪಥದವರ ಸುಂದರ ಪೌರಾಣಿಕ ಚಿತ್ರ
ತಿಲೋತ್ತಮೆ (ಕನ್ನಡ)
ಭೂಮಿಕೆ— ಜಯಶ್ರೀ, ಜಿ. ಆರ್. ಸ್ವಾಮಿಯವರ ಕಲಾವಿಶಾರದ ಕೊಟ್ಟೂರಪ್ಪ
— SUKH SAMPATH CHITRAPAT Release

ಉಡ್‌ಲಾಂಡ್
ಶಿಸ್ನ
ಜನಪ್ರಿಯ 2 ನೇ ವಾರ
ಪ್ರತಿ ಸಂಸಾರವೂ ನೋಡಲೇಬೇಕಾದ
ಅಮೋಘ ಪೌರಾಣಿಕ ಹಿಂದಿ ಚಿತ್ರ
ಶ್ರೀ ಗಣೇಶ ಜನ್ಮ
ನಿರೂಪ ರಾಯ್, ತ್ರಿಲೋಕ್ ಕಪೂರ್
ಪ್ರತಿ ದಿನ 3 ಪ್ರದರ್ಶನಗಳು



Protect the Cow

Edited, Printed and Published by Dharma Prachara Nirata M. S. Krishna Rao, at the Satyavadi Press Chamrajpuram Mysore

Regd No M 1299 Sri ಶಾ 16—10—51

SATYAVADI = 35th Year

ಸತ್ಯವಾದಿ

ಸಂಸ್ಥಾಪಕರು- ಆರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಚುನಾವಣಾ ಪಟ್ಟಿ ಬಗೆಗೆ ಎ ಕಾಂಗ್ರೆಸಿಗರಲ್ಲಿ ಅಸಂತೃಪ್ತಿ ?

ಮೈಸೂರು ಕಾಂಗ್ರೆಸಿನ ಚುನಾವಣಾ ಪಟ್ಟಿ ಬಗ್ಗೆ ಅನೇಕ ಕಾಂಗ್ರೆಸಿಗರಿಗೆ ಅಸಂತೃಪ್ತಿಯಾಗಿದೆಯೆಂದೂ, ಆ ಬಗೆಗೆ ಅಪೀಲು ಹೋಗುವರೆಂದೂ ತಿಳಿದು ಬಂದಿದೆ ಚಿಕ್ಕಮಗಳೂರಿನ ಕಾಂಗ್ರೆಸ ಕೆಲಸಗಾರರು ಶ್ರೀ ಅಣ್ಣಪ್ಪ ಶೆಟ್ಟರನ್ನು ಸೂಚಿಸಿದ್ದರೂ ಸಮಿತಿ ಶ್ರೀಮತಿ ಸುಬ್ಬಮ್ಮನವರನ್ನು ಆರಿಸಿದ ವರದಿ ಇದೆ

ಪ್ರಮುಖ ಸುದ್ದಿಗಳು

× ಯೋಲಾ ಎಂಬ ಹೆಸರಿನ ನಾಯಿ ಒಟ್ಟಿಗೆ 20 ಮರಿಗಳಿಗೆ ಜನ್ಮ ಎತ್ತಿದೆ ಈ ನಾಯಿ ಸ್ಪೇನಿನ ಹ್ಯೂಲ್ವಾದಲ್ಲಿರುವ ಸಾಂಚೆಜ' ಎಂಬವರದು

× ಭಾರತ ಸರ್ಕಾರ, ಅಧ್ಯಕ್ಷರಿಗೆ ಪಂಜಾಬಿನ ರೈತ ಸಂರಕ್ಷಣೆಗಾಗಿ ಶಾಸನ ಜಾರಿ ಮಾಡಲು ಸಲಹೆ ಕೊಡಲಿದೆ

× ದಿನವೂ 4 ಗಂಟೆ ಮಳೆ ಬಿದ್ದಲ್ಲಿ ಉಚಿತ ಭೋಜನ, ವಸತಿ ! ಈ ವಿಷಯವನ್ನು ಡೆನ್ಮಾರ್ಕಿನ ಹೋಟೆಲಿನವರ್ ಪ್ರಾರಂಭಿಸಿರುವರು

× ತಮಿಳು ನಾಡು ಚುನಾವಣೆಯಲ್ಲಿ ದ್ರವಿಡ ಕಳಗಂ ಕಮ್ಯುನಿಸ್ಟರೊಡನೆ ಸಹಕರಿಸುವದೆಂದು ಮುದಂತಾದ ವಾರ್ತೆ

× ಪೂರ್ವ ಪಂಜಾಬಿನ ಹೊಸ ರಾಜಧಾನಿಗೆ ಚಂಡೀಘರ ಎಂಬ ಹೆಸರು ಇಡಬೇಕೆಂದು ಸಲಹಾ ಸಮಿತಿ ಶಿಫಾರಸು ಮಾಡಿದೆ

× ಪ್ರಿಟೋರಿಯ ಹತ್ತಿರದ ಪ್ರಿವಿಯರ್ ವಜ್ರಗಣಿಯಲ್ಲಿ, ಒಂದು, 2 ವರೆ ಅಂಗುಲ ಉದ್ದ, 1 ವರೆ ಅಂಗುಲ ಅಗಲ ಮುಕ್ಕಾಲು ಅಂಗುಲ ದಪ್ಪವಿದ್ದ 283 ವರೆ ಕ್ಯಾರೆಟ್ಟು ತೂಕವಿರುವ ಒಂದು ಶ್ರೇಷ್ಠ ತರಹದ ವಜ್ರ ಸಿಕ್ಕಿದೆ ಇದಕ್ಕೆ ವಜ್ರ ನಿಪುಣರು 1 ಲಕ್ಷದಿಂದ 1 ವರೆ ಲಕ್ಷ ಪೌಂಡುಗಳ ಬೆಲೆ ಅಂದಾಜು ಮಾಡಿದ್ದಾರೆಂದು ಜೊಹಾನ್ಸಬರ್ಗಿನ ವರದಿ ತಿಳಿಸುತ್ತದೆ

× ಕೊರಿಯಾದ 4284 ನೇ ಜನ್ಮದಿನೋತ್ಸವ ವೈಭವದಿಂದ ಆಚರಿಸಲ್ಪಟ್ಟಿತೆಂದು ವಾಷಿಂಗ್ಟನ್ ವಾರ್ತೆ

× ಅಮೇರಿಕದ ಮೂರು ಮುಖ್ಯ ರೈಲ್ವೆಗಳಲ್ಲಿ ಸ್ತ್ರೀಯರು ಮುಖ್ಯಸ್ಥರಾಗಿರುವರು

× ಬೆಂಗಳೂರು ಗುಟ್ಟಹಳ್ಳಿಯಲ್ಲಿ ಘಟ ಸರ್ಪವೊಂದು ಕಂಡುಬಂದು ಅದೃಶ್ಯವಾಗಿ ಆ ಸ್ಥಳದಲ್ಲಿ ಕಲ್ಲುಗಳು ಕಾಣಲ್ಪಟ್ಟವೆ

ಹುಬ್ಬು ಗಾಳಿ

ಪೂರ್ವ ಗೋಲಾರ್ಧದಲ್ಲಿ ದುಂದುಗಾರಿಕೆಯ ವಿಲಾಸ ಪ್ರಿಯತೆಗಾಗಿ ಹೆಸರಾಂತರಂದರೆ ರಾಜಮಹಾರಾಜರು ಸಂಸ್ಥಾನಿಕರು ಅವರ ಪ್ರಣಯವಿಹಾರಗಳ ಕತೆಗಳಂತೂ ಅದ್ಭುತ ರೋಮಾಂಚಕಾರಿ ಕಾದಂಬರಿಗಳನ್ನು ಮೀರುತ್ತವೆಯೆಂದರೆ ಅತಿಶಯೋಕ್ತಿಯೇನಿಲ್ಲ ಮುನ್ನೆ ಮುನ್ನೆ ಇಂಥ ಪ್ರಕರಣವೊಂದು ಯುರೋಪ ಖಂಡದಲ್ಲಿ ನಡೆಯಿತು. ಅದು ಹೀಗಿದೆ —

ಈಜಿಪ್ತದ ಅರಸು ಫರೂಕ್, ತನ್ನ 2 ನೆಯ ಲಗ್ನದ ಹದಿನೇಳನೆ ಹುಡುಗಿ ರಾಣಿ ನರಿಮಾನ್ ಎಂಬ ಮದುಮಗಳೊಡನೆ ಯುರೋಪು ಖಂಡದಲ್ಲಿ ಹನಿಮೂನ್ ಪ್ರಣಯ ವಿಹಾರವನ್ನು 5 ತಿಂಗಳ ವರೆಗೆ ಮಾಡಿದರಂತೆ

ಈ 5 ತಿಂಗಳಲ್ಲಿ ಅವರ ನೆಚ್ಚಿದ ಸರಾಸರಿಯು ಪ್ರತಿ ದಿವಸ ಇಪ್ಪತ್ತು ಸಾವಿರ ರೂಪಾಯಿಯಂತೆ ಇತ್ತಂತೆ

ಅವರ ಈ ಪ್ರಯಾಣದಲ್ಲಿ ಜತೆಗಿದ್ದ ಗಂಟು ಗದಡಿಗಳ ತೂಕ 20 ಟ್ರಕ್‌ಗಳು

ಒಂದು ಸಂಜೆ ಈ ಹದಿನೇಳರ ಹುಡಿಗೆ ರಾಣಿ ಪೇಟೆಗೆಂದು ಹೊರಟು ಒಂದೇ ಸಲಕ್ಕೆ 25 ಗೌನುಗಳನ್ನು (ಅವುಗಳ ಬೆಲೆ ರೂ 330000 !) ಕೊಂಡಳಂತೆ

ಸ್ವಿಡ್ಸರಲಂಡದ ಒಂದು ಹಾಟೇಲಿನಲ್ಲಿ ಏಕಾಂತಬೇಕೆಂದು ಅಲ್ಲಿ ಕಟ್ಟಿಸಲಾದ ಅಡ್ಡ ಗೋಡೆಗೆ 16 ಸಾವಿರ ರೂ ವೆಚ್ಚ ಮಾಡಲಾಯಿತಂತೆ ಅಲ್ಲಿ ಅವರು ಕಳೆದುದು ಒಂದೇ ರಾತ್ರಿಯಂತೆ !

ಹೀಗಿದೆ ಈ ನರೋತ್ತಮರ ಹುಚ್ಚು ಗಾಳಿ

× ಬೊಂಬಾಯಿ ಲಾಯಿಡ್ಸ್ ಬೇಂಕಿನ ದರೋಡೆ ಖಟ್ಲೆಯಲ್ಲಿ ಮುಖ್ಯ ಆರೋಪಿಯಾದ ಅನೋಖಿಲಾಲನ ಹೆಂಡತಿಯಾದ ಕಮಲಾ ಅನೋಖಿಲಾಲಳನ್ನು ಹೈಕೋರ್ಟಿನ ನ್ಯಾಯಾಧೀಶರು ಕಾಲು ಲಕ್ಷ ರೂ ಜಾಮೀನು ಮತ್ತು ಅಷ್ಟೇ ಹಣದ ಇಬ್ಬರು ಜಾಮೀನುದಾರರನ್ನು ಒಪ್ಪಿಕೊಂಡು ಅವಳನ್ನು ಜಾಮೀನಿನ ಮೇಲೆ ಬಿಡಬೇಕೆಂದು ಆಜ್ಞೆ ಇತ್ತರು

ಪಾಕ್ ಬಗೆಗೆ ಲೇಖನ

ಪರ್ಷಿಯದ ಖಯಾಂ ಇ ಮಿಲ್ಲಿ ಎಂಬ ವಾರ ಪತ್ರಿಕೆ ಬರೆದ ಲೇಖನದಲ್ಲಿ ಪಾಕಿಸ್ತಾನ ಸ್ವತಂತ್ರವಾದ ರಾಜ್ಯ ವಲ್ಲವೆಂದು ತಿಳಿಸಿದೆ ಸಾಮ್ರಾಜ್ಯ ವಾದವನ್ನು ಏಷ್ಯದಲ್ಲಿ ಮುಂದುವರಿಸಲು ಬ್ರಿಟನ್ ಕುತಂತ್ರದಿಂದ ಈ ರಾಜ್ಯವನ್ನ ಸೃಷ್ಟಿಸಿತೆಂದು ಅದು ತಿಳಿಸಿದೆ.

ಅಂಡಮಾನಿನ ಕೇಳಿಕೆ

ಅಂಡಮಾನಿನ ರಾಷ್ಟ್ರೀಯ ಕಾಂಗ್ರೆಸ್ ಸಮಿತಿ ಭಾರತ ಅಧ್ಯಕ್ಷರಿಗೆ ಮನವಿ ಪತ್ರ ಅರ್ಪಿಸಿ ಹೊಸ ಪಾರ್ಲಿಮೆಂಟಿನಲ್ಲಿ ತಮ್ಮ ದ್ವೀಪಗಳಿಗೂ ಪ್ರಾತಿನಿಧ್ಯ ಕೊಡಬೇಕೆಂದು ತಿಳಿಸಿದೆ.

ಇದೊಂದು ಮುಖ್ಯ ಕೆಲಸ

ಮೊನ್ನೆ ನವದೆಹಲಿಯಲ್ಲಿ ಕಾಂಗ್ರೆಸ್ ಕೆಲಸಗಾರರ ಶಿಕ್ಷಣ ತರಗತಿಯನ್ನು ಪಂ|| ನೆಹರು ಉದ್ಘಾಟನೆ ಮಾಡುತ್ತಾ ಜಾತಿವಾದವನ್ನು ಎದುರಿಸುವದೇ ಭಾರದ ಮುಂದೆ ಈಗಿರುವ ಮುಖ್ಯ ಕೆಲಸವೆಂದು ತಿಳಿಸಿದರು

ತಿರಸ್ಕರಣ

ಭಾರತ ಕಮ್ಯುನಿಸ್ಟ್ ಮುಖಂಡ ಶ್ರೀ ಎ. ಕೆ ಗೋಪಾಲಸ್ವರು ಭಾಷಣ ಮಾಡಲು ಕೇಳಿದ ಅನುಮತಿಯನ್ನು ಹೈದರಾಬಾದ್ ಸರ್ಕಾರ ತಿರಸ್ಕರಿಸಿದೆ.

ಹಳ್ಳಿಗರಿಗೆ ಹೇಳಿಕೆ

ಸರ್ ಎಂ. ವಿಶ್ವೇಶ್ವರಯ್ಯನವರು ಮೊನ್ನೆ ಬೊಂಬಾಯಿನಲ್ಲಿತ್ತ ಹೇಳಿಕೆಯಲ್ಲಿ ಹಳ್ಳಿಗಾಡು ಜನತೆಯ ಕಾರ್ಯತತ್ಪರತೆ ಅಧಿಕಗೊಳ್ಳಬೇಕು ಎಂದಿರುವರು

ತಮ್ಮೊಡನೆ ಅವರನ್ನೂ ತಂದರು

ಕಾಂಗ್ರೆಸಿಗೆ ಮಹಾ ಕೋಸಲ ಪ್ರಜಾ ಪಕ್ಷದ ನಾಯಕ ಠಾಕೂರ ನಿರಂಜನ ಸಿಂಗರು ನೂರೈವತ್ತು ಮಂದಿಯೊಡನೆ ಮತ್ತೆ ಹಿಂದಿರುಗಿದರು.

ದಿವ್ಯ ವಾಣಿ

ಧೈರ್ಯದಿಂದ ಜಾಣನಾಗು; ಒಡನೆ ಜಾಣನಾಗು ! ಯೋಗ್ಯ ರೀತಿಯಿಂದ ಜೀವನ ಮಾಡುವ ಕೆಲಸವನ್ನು ಇಂದು ನಾಳೆಯೆಂದು ಮುಂದು ಹಾಕುವವನು ನದಿ ಬತ್ತುವ ವರೆಗೂ ಕಾದು ಆ ಮೇಲೆ ದಾಟುವನೆಂದು ದಂಡೆಯಲ್ಲಿ ಕೂಡ್ರುವ ಗಾವಿಲನಂತೆ ಹಾಸ್ಯಾಸ್ಪದನಾಗ ತ್ತಾನೆ.

— ಹೊರೇಸ್.

ಬ್ರಿಟ್ ಸೇನೆಯ ಪ್ರವೇಶ

ಬ್ರಿಟಷ್ ಪ್ಯಾರಾಷೂಟ್ ಸೇನೆ ಸೂಯಸ್‌ನಲ್ಲಿ ಇಳಿವ ವಾರ್ತೆ ನಿಕೋಸಿಯಾದಿಂದ ಬಂದಿದೆ

ವಿಶೇಷ ಗ್ರಾಂಟು

ಈಜಿಪ್ಟ್ ಸರ್ಕಾರ ಷೆಕ್ಸ್‌ಪಿಯರಿನ ಸರ್ವ ನಾಟಕಗಳನ್ನು ಅರಬ್ಬಿ ಭಾಷೆಗೆ ತರ್ಜುಮೆಯಿಸಲು ವಿಶೇಷ ಗ್ರಾಂಟು ಕೊಡುವ ತೀರ್ಮಾನಕ್ಕೆ ಬಂದಿದೆ.

೨೦ ನೆ ದಿನಕ್ಕೆ ಹೋಯ್ತು

ಬೆಂಗಳೂರು ಅಡಿಷನಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟಿನ ಶ್ರೀ ಬಾಲರತ್ನಂ ಮತ್ತು ಇನ್ನಿಬ್ಬರ ಮೇಲೆ ಹೂಡಿರುವ ಮೊಕದ್ದಮೆ ಇದೇ 20 ನೇ ತಾ|| ಮುಂದಕ್ಕೆ ಹೋಯಿತು

ಪ್ರಾಣಬಿಡುತ್ತಿದ್ದುದು ತಪ್ಪಿತು

25 ವರ್ಷದ ಆರೋಕ್ಯನಾಥನೆಂಬವರು 38 ವರ್ಷದ ಆರೋಕ್ಯ ಮೇರಿ ಎಂಬವರೊಡನೆ ಪ್ರೇಮದಿಂದಿದ್ದು ಮದುವೆಗೆ ಹಿರಿಯರು ಒಪ್ಪದ್ದರಿಂದ ಈರ್ವರೂ ವೈಲುತುತ್ತ ಸೇವಿಸಿ ಪ್ರಾಣ ಬಿಡತ್ತಿದ್ದುದನ್ನು ಚಿಕಿತ್ಸೆ ನಡೆಯಿಸಿ ತಪ್ಪಿಸಲಾಯಿತೆಂದು ಭದ್ರಾವತಿಯಿಂದ ವರದಿ ಆಗಿದೆ

ಹರಿಜನ ಪ್ರಗತಿ

ಮೇಲ್ಕಂಡ ಬಾಬ್ತಿಗೆ ಮದರಾಸಿನ ವರ್ಷದ ವೆಚ್ಚ ರೂ 1ಕಾಲು ಕೋಟಿ.

ಸಂಪುಟ ೧೭ ಸಂಚಿಕೆ ೮ · ॥ ಶ್ರೀ ॥ ತಾ॥ 15-10-1951

— ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೃಷ್ಣಾನಂದ ಮಠಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ. ಸ್ವ. ಸಂಘ

ಶ್ರೀ ಚಂದ್ರಮೌಳೀಶ್ವರ ಮಹೋತ್ಸವ

ಡಾಕೋರ್ ಅ 8— ಶ್ರೀ ಚಂದ್ರಮೌಳೀಶ್ವರ ಮಹೋತ್ಸವವು ನಿನ್ನೆ ಅತ್ಯಂತ ವಿಜೃಂಭಣೆಯಿಂದ ಪ್ರಾರಂಭವಾಯಿತು: ಯಜ್ಞಮಂಟಪವೂ ಸಭಾಮಂಟಪವೂ ಪತಾಕೆಗಳಿಂದ ಶೃಂಗರಿಸಲ್ಪಟ್ಟಿದ್ದವು; ಪ್ರಾತಃಕಾಲದಲ್ಲಿ ಬ್ರಾಹ್ಮಣರು ವೇದಮಂತ್ರಗಳನ್ನು ಪಠಿಸಲು ಪ್ರಾರಂಭಿಸಿದರು; ಸಮಾರಂಭದಲ್ಲಿ ಭಾಗವಹಿಸಲು ಭಾರತದ ಮಹಾ ಸಂತರಾದ ಶ್ರೀ ಸ್ವಾಮಿ ಕರಪಾತ್ರಜೀಯವರು ಮಧ್ಯಾಹ್ನ ಆಗಮಿಸಿದರು. ಮತ್ತು ಸಾರ್ವಜನಿಕರಿಂದ ಅಭೂತಪೂರ್ವದಿಂದ ಸ್ವಾಗತಿಸಲ್ಪಟ್ಟರು ಸಾಯಂಕಾಲ ಪ್ರಚಂಡ ಸಭೆಯು ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ನಡೆದು ಶ್ರೀ ರಾಮನಾಥ ವಕೀಲರು ಚಿಕ್ಕದಾದ ಸುಮಧುರ ಸ್ವಾಗತ ಭಾಷಣಮಾಡಿ, ಅದನ್ನು ಡಾಕೋರು ಮಹಾಜನರ ಪರವಾಗಿ ಶ್ರೀ ದಯಾಭ್ಯಾಯರು ಸಮರ್ಥಿಸಿದರು ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾ ಸ್ವಾಮಿಗಳವರು ಸ್ವಾಮಿ ಕರಪಾತ್ರಜೀಯವರ ವಿಷಯವಾಗಿ ಆಂದವಾದ ಭಾಷಣ ಮಾಡಿದರು. ಶ್ರೀ ಜಗದ್ಗುರುಗಳು ಹೇಗೆ ಸರಕಾರದ ನೀತಿಯಿಂದ ಸಾರ್ವಜನಿಕರು ಎಲ್ಲ ವಿಷಯಗಳಲ್ಲಿಯೂ ಪೀಡಿಸಲ್ಪಡುತ್ತಿರುವದೆಂಬುದನ್ನೂ ಇದನ್ನು ತಪ್ಪಿಸಿ, ಭಾರತೀಯ ಸಂಸ್ಕೃತಿಯನ್ನು ಕಾಪಾಡುವ ಸಲುವಾಗಿ ರಾಮರಾಜ್ಯ ಪರಿಷತ್ತು ಸ್ಥಾಪಿಸಲ್ಪಟ್ಟಿರುವ ವಿಷಯವನ್ನು, ಮತ್ತು ಡೆಲ್ಲಿಯಲ್ಲಿ ಹೇಗೆ ಸತ್ಯಾಗ್ರಹ ನಡೆಯುತ್ತಿರುವುದೆಂಬುದನ್ನು, ಸತ್ಯಾಗ್ರಹಿಗಳು ಎಂತಹ ಅನುಚಿತ ಉಪಚಾರಕ್ಕೊಳಗಾಗಿರುವರೆಂಬುದನ್ನು ತಾವು ಬೇಕಾದರೆ ಮಂತ್ರಿಗಳಿಗೆ ಹಿಂದೂಕೋಡು ಹೇಗೆ ಭಾರತೀಯ ಸಂಸ್ಕೃತಿಯು ಒಡಕ್ಕೆ ಕೊಡಲಿ ಪ್ರಾಯವಾಗಿರುವುದೆಂಬುದನ್ನು ನಿಶ್ಚಯಪಡಿಸಿ ಕೊಡಲು ಸಿದ್ಧರಿರುವೆವೆಂದೂ ಆದಕ್ಕೆ ಕರಪಾತ್ರಜೀಯವರ ಮೇಲೂ ಮಂತ್ರಿಗಳ ಮೇಲೂ ತೀವ್ರ ಲಾಠಿಚಾರ್ಜು ಮಾಡಲಾಯಿತೆಂದೂ, ಹೃದಯವಿದ್ರಾವಕವಾದ ಸ್ಫೂರ್ತಿದಾಯಕವಾದ ತಮ್ಮ ಭಾಷಣದಲ್ಲಿ ವಿವರಿಸಿದರು ಹಿಂದೂಕೋಡು ಮಸೂದೆಯ ಮೇಲೆ ಪ್ರತಿಭಟನೆ ವ್ಯಕ್ತಪಡಿಸಲು ಸಾರ್ವಜನಿಕರು ರಾಮರಾಜ್ಯ ಪರಿಷತ್ತಿಗೆ ಸೇರಿ ರಾಮರಾಜ್ಯಪರಿಷತ್ತಿಗೆ ಮಹಾ ಚುನಾವಣೆಯಲ್ಲಿ ಓಟು ಕೊಡಬೇಕೆಂದು ತಿಳಿಸಿದರು. ಕರಪಾತ್ರಿ ಮಹಾರಾಜಕಿ ಜೈ ಜಯಘೋಷಣೆಯೊಡನೆ ಸ್ವಾಮಿಯವರು ಈ ದಿನ ಬೆಳಿಗ್ಗೆ ಡಾಕೊರಿನಿಂದ ತೆರಳಿದರು. ಮಹೋತ್ಸವವೂ ಮಹಾರುದ್ರ ಯಜ್ಞವೂ ಏಳು ದಿನಗಳು ನಡೆಯುವುವು. ತಾ॥ 10 ಮತ್ತು 11 ರಲ್ಲಿ ಧರ್ಮ ಸಮ್ಮೇಳನವೂ ಸೇರುವುದು.

ಡಾಕೋರು ಅ 9— ಡಾಕೋರಿನಲ್ಲಿ ಚಂದ್ರಮೌಳೀಶ್ವರ ಮಹೋತ್ಸವ ಸಂಬಂಧದಲ್ಲಿ 2 ನೇ ದಿನದ ಕಾರ್ಯಕಲಾಪ ಹೇರಳವಾಗಿದ್ದವು ಬೆಳಿಗ್ಗೆ ಶ್ರೀ ಕರಪಾತ್ರಜಿಸ್ವಾಮಿಗಳ ಸಾರ್ವಜನಿಕ ಬೀಳ್ಕೊಡುವಿಕೆ ಏರ್ಪಾಡಾಗಿತ್ತು; ಮಧ್ಯಾಹ್ನ ಸಮಾರಂಭಗಳಲ್ಲಿ ಭಾಗವಹಿಸಲು ಮತ್ತು ಯಜ್ಞ ದರ್ಶನಕ್ಕಾಗಿ ಸಂಸ್ಥೆಗಳಿಂದ ಬಹು ಜನ ಬಂದಿ ಆಗಮಿಸಿದ್ದರು ಸಂಜೆ ಭಾರಿ ಸಭೆ ನಡೆಸಲ್ಪಟ್ಟು, ಅಹಮದಾಬಾದಿನ ನರ್ಮದಾಶಂಕರರು ತಮ್ಮ ಆನಂದದಾಯಕ ಶೈಲಿಯಲ್ಲಿ, ಭವ್ಯರಸಭರಿತವಾದ ತಮ್ಮ ಕವಿತೆ ಭಾಷಣಗಳಿಂದ ಸಭಿಕರನ್ನು ಆನಂದಿಸಿದರು. ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳವರು, ಸಭಿಕರನ್ನು ಕುರಿತು, ಏನೇ ಆದರೂ ಧರ್ಮವನ್ನು ಆಚರಿಸಬೇಕೆಂದೂ, ಮತ್ತು ಧರ್ಮವಿದ್ದೆಡೆ ವಿಜಯ ಖಂಡಿತವೆಂದೂ, ಧರ್ಮಾಚರಣೆಯಿಂದ ಲೋಕೋತ್ತರ ಕಾರ್ಯ ಸಾಧಿಸಬಹುದೆಂದೂ ತಿಳಿಸಿ ಜನರು ರಾಮರಾಜ್ಯ ಪರಿಷತ್ತಿಗೆ ಸೇರಿ ಅದರ ಉಮೇದುವಾರರಿಗೇ ಓಟು ಕೊಡಬೇಕೆಂದರು.

ಶ್ರೀ ಚಂದ್ರಮೌಳೀಶ್ವರ ಮಹೋತ್ಸವದ ಪರಿಸಮಾಪ್ತಿ

ಡಾಕೋರು, ಅ 12— ನಿನ್ನೇ ದಿವಸ ಮಹಾರುದ್ರ ಯಜ್ಞದ ಪೂರ್ಣಾಹುತಿ ನಡೆದು, ಶ್ರೀ ಚಂದ್ರಮೌಳೇಶ್ವರ ಮಹೋತ್ಸವವು ಪರಿಸಮಾಪ್ತಿಗೊಂಡಿತು. ಪಶ್ಚಿಮ ಭಾರತದ ಅನೇಕ ಕಡೆಗಳಿಂದ ದರ್ಶನಕ್ಕಾಗಿ ಜನರು ಸಾವಿರಗಟ್ಟಲೆ ಸೇರಿದ್ದರು. ಸಾಯಂಕಾಲ ಪೂರ್ಣಾಹುತಿ ಮುಗಿದನಂತರ, ಧರ್ಮ ಸಂವೇದನವು ಜರುಗಿತು ; ದೊಡ್ಡದೊಡ್ಡವರಿಂದ ಬಂದಿದ್ದ ನೂರಾರು ಸಂದೇಶಗಳು ಓದಲಾಯಿತು : ಪಶ್ಚಿಮ ಭಾರತ ಮತ್ತು ಡಾಕೋರಿನ ನಾಗರೀಕರ ಪರವಾಗಿ ಶ್ರೀ ಟಿ. ತಾಂಬೇಕರರಿಂದ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳವರಿಗೆ ಸನ್ಮಾನಪತ್ರ ಅರ್ಪಿಸಲಾಯಿತು ; ಹೊರಊರಿನ ಪ್ರಮುಖ ವಿದ್ವಾಂಸರುಗಳು ಸ್ವಾಮಿ ಅಭಯಮುತುಷ್ ರಾಂಜೀ, ಪ್ರೊ॥ ದುರ್ಕಾಲ್, ಜೋಷಿ ಗಿರಿಜಾ ಶಂಕರ್, ಕವಿ ನರ್ಮದಾಶಂಕರ್, ಶಾಸ್ತ್ರಿ ಚಂದ್ರಶೇಖರ್, ಈರಾಲ್ ಠಾಕೂರು ಸಾಹೇಬ್ ಮತ್ತು ಅನೇಕಾನೇಕರು ಭಾಷಣಮಾಡಿದರು. ಶ್ರೀಯುತ ಗುಣವಂತಲಾಲ್ ಅವೆಯವರು ತಮ್ಮ ಹಾವಭಾವಗಳಿಂದಲೂ ವಿನೋದಪೂರ್ಣ ಭಾಷಣದಿಂದಲೂ ಸಭಿಕರನ್ನು ಆನಂದಗೊಳಿಸಿದರು. ಶ್ರೀ ಮಂಜುಲಾಲ್ ದಾವೆಯವರ ನಿಸ್ವಾರ್ಥ ಸೇವೆಯ ಬಗ್ಗೆ ಶ್ರೀ ಜಗದ್ಗುರುಗಳವರು ಉನ್ನತ ಮಾತುಗಳನ್ನಾಡಿ ಅವರಿಗೆ ನ್ಯಾಯುವಿದ್ವತ್ ಭಾಸ್ಕರ ಎಂಬ ಪ್ರಶಸ್ತಿಯನ್ನು ಸ್ವರ್ಣಪದಕದೊಡನೆ ಅನುಗ್ರಹಿಸಿದರು. ಪ್ರೊ॥ ದೂರ್ಕಾಲ್, ಶಾಸ್ತ್ರಿ ಅನುರೂಪ್‌ರಾಂಜೀ, ಈರಾಲ್ ಠಾಕೂರ್ ಸಾಹೇಬ್, ಶ್ರೀ ತಂಬೇಕರ್ ರಾಂಲಾಲ್ ವಕೀಲ್, ಶಾಸ್ತ್ರಿ ಚಂದ್ರಶೇಖರ್, ಮತ್ತಿತರ ಅನೇಕರಿಗೆ ವಿವಿಧ ಬಿರುದುಗಳು ಕೊಡಲಾಯಿತು. ಶ್ರೀ ಶಂಕರ ಭಾಗತರು ಸಭಿಕರನ್ನು ಮನೋರಂಜಕ ಮತ್ತು ಬೋಧಪ್ರದ ಭಜನೆಯಿಂದ ಸಂತೋಷಗೊಳಿಸಿದರು ಶ್ರೀ ಚಂದ್ರಮೌಳೇಶ್ವರರ ಆಶ್ರಯದಲ್ಲಿ ಜನರೆಲ್ಲರೂ ಸಂಘಟಿತರಾಗಬೇಕೆಂದೂ ವಶ್ಯ ರಾಮರಾಜ್ಯದ ಮೂಲಕ ಭಾರತೀಯ ಸಂಸ್ಕೃತಿಯನ್ನು ಕಾಪಾಡಲು ಸಂಪೂರ್ಣ ಪ್ರಯತ್ನ ಮಾಡಬೇಕೆಂದೂ; ಜಗದ್ಗುರುಗಳವರು ತಿಳಿಸಿ ಆಶೀರ್ವದಿಸಿದರು. ಸಾರ್ವಜನಿಕರು ಉತ್ಸಾಹದಿಂದ ಭಾಗವಹಿಸಿದ ವೈಭವ ಅಭಿವೃತಸ್ನಾನ ಮೆರವಣಿಗೆಯೊಂದಿಗೆ ಮಹೋತ್ಸವವು ಪರಿಸಮಾಪ್ತಿಗೊಂಡಿತು

ಡಾಕೋರ್, ಅ 11— ಶ್ರೀ ಚಂದ್ರಮೌಳೇಶ್ವರ ಮಹೋತ್ಸವದ 3 ನೆ ದಿನಸದ ಕಾರ್ಯಕಲಾಪ ಮೊನ್ನೆ ಡಾಕೋರು ನಾಗರೀಕರಿಂದ ಅತ್ಯಂತ ವೈಭವದಿಂದ ನೆರವೇರಿಸಲ್ಪಟ್ಟಿತು. ಹೊರದೇಶದ ಜನರು ಶ್ರೀ ಮಹಾರುದ್ರ, ಶಕ್ತಿಮಾತ ಮತ್ತು ಜಗದ್ಗುರುಗಳವರ ದರ್ಶನ ಪಡೆದರು. ಸಾಯಂಕಾಲ ನಡೆದ ಭಾರಿ ಸಭೆಯಲ್ಲಿ ವಕೀಲ್ ದೀನನಾಥ್ ಮತ್ತಿತರರು ಭಾಷಣ ಮಾಡಿದರು ಜನರು ಶಕ್ತಿ ಮಾತೆಯನ್ನು ಪೂಜಿಸಬೇಕೆಂದೂ, ರಾಮರಾಜ್ಯಕ್ಕೆ ಬೆಂಬಲವೀಯಬೇಕೆಂದೂ ಜಗದ್ಗುರುಗಳವರು ಮಾಡಿದ ಅಮೋಘ ಭಾಷಣದಲ್ಲಿ ತಿಳಿಸಿದರು.

ಮಹೋತ್ಸವದ ಕಾರ್ಯಕಲಾಪಗಳ 4 ನೇ ದಿವಸವಾದ ನಿನ್ನೆ ಅಂದವಾಗಿ ಶೃಂಗರಿಸಲ್ಪಟ್ಟಿದ್ದ ಪಲ್ಲಕ್ಕಿಯಲ್ಲಿ ಶ್ರೀ ಚಂದ್ರಮೌಳೇಶ್ವರ ಮಹಾದೇವದ ಉತ್ಸವವು ರಾಜಬೀದಿಗಳಲ್ಲಿ ವಿಜೃಂಭಣೆಯಿಂದ ನಡೆಯಿತು. ಜೊತೆಯಲ್ಲಿ ಜಪಪ್ಪಳಿ ಭಜನೆಯವರೂ, ಸನ್ಯಾಸಿಗಳೂ ಮತ್ತಿತರರೂ ನೆರೆದಿದ್ದರು ಮತ್ತೊಂದು ಪಲ್ಲಕ್ಕಿಯಲ್ಲಿ ಶ್ರೀ ಜಗದ್ಗುರುಗಳು ಆಸನಾರೂಢರಾಗಿದ್ದರು. ರಸ್ತೆಗಳಲ್ಲಿ, ಮನೆಯ ಕಿಟಕಿಗಳಲ್ಲಿ, ಬಿಸ್ತಲು ಮುಚ್ಚಿಗಳ ಮೇಲೆ ಜನರು ಕಿಕ್ಕಿರಿದು ಸೇರಿದ್ದು, ದರ್ಶನಲಾಭ ಪಡೆದು ಅತ್ಯಾನಂದಭರಿತರಾದರು

ನಾಲ್ಕು ಗಂಟೆಗಳ ಕಾಲ ನಡೆದ ಈ ವೈಭವ ಉತ್ಸವದಲ್ಲಿ ದಾರಿಯುದ್ದಕ್ಕೂ ಪೂಜೆಗಳು, ಮಂಗಳಾರತಿಗಳು ನಡೆದು ಕಾಣಿಕೆಗಳು ಅರ್ಪಿಸಲಾಗುತ್ತಿದ್ದಿತು.

ಸಾಯಂಕಾಲ ಶ್ರೀ ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ಧರ್ಮಸಮ್ಮೇಳನವು ನಡೆದು ಸಹಸ್ರಾರು ಜನರು ಭಾಗವಹಿಸಿದ್ದರು. ವಿದ್ವಾಂಸರಾದ ಮಹಾ ಪಂಡಿತರ ಭಾಷಣಗಳು ನಡೆದವು. ಅನೇಕ ವಿನೋದಾವಳಿಗಳೂ ಇದ್ದುವು. ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳು ಭಾಷಣಗಳ ಸಾರಾಂಶ ತಿಳಿಸಿ ಧರ್ಮಶಾಸ್ತ್ರಗಳ ಆಧಾರವಿತ್ತು, ಜನರು ಧರ್ಮಮಾರ್ಗವನ್ನನುಸರಿಸಬೇಕೆಂದೂ ತಿಳಿಸಿದರು. ರಾತ್ರೆ ಭಜನೆ ನಡೆಯಿತು ಮಹಾರುದ್ರ ಪೂರ್ಣಾಹುತಿಯು ಇಂದು ನಡೆಯಿತು. ಸಂಮೇಳನವು ನಡೆಯುವುದು.

SHAKTI SUDHA

A Superb Tonic

ದಿವ್ಯವಾಣಿ

ಐಶ್ವರ್ಯಕ್ಕೆ ಒಳ್ಳೆಯತನ, ಪರಾಕ್ರಮಕ್ಕೆ ಹಂಟದಿರುವುದು, ತಿಳುವಳಿಕೆಗೆ ಸೈರಣೆ ಸದ್ವಂಶದಲ್ಲಿ ಹುಟ್ಟಿದುದಕ್ಕೆ ವಿನಯ, ಧನಕ್ಕೆ ದಾನ, ತಪಸ್ಸಿಗೆ ಶಾಂತಿ ಬಲಕ್ಕೆ ಪರಿಡ ಅಪರಾಧವನ್ನು ಮನ್ನಿಸುವುದು, ಧರ್ಮಕ್ಕೆ ಫಲಾಕಾಂಕ್ಷೆ ಇಲ್ಲದಿರುವುದು ಭೂಷಣ; ಇವೆಲ್ಲಕ್ಕೂ ಕಾರಣವಾದ ಶೀಲ ಉತ್ತಮ ಭೂಷಣ.

— ಸುಭಾಷಿತ

ಕನ್ನಡಿಗನ ಪ್ರಾರ್ಥನೆ

ಕನ್ನಡ ಮಹಾಲಕ್ಷ್ಮೀ, ತಾಯಿ ರೇಣುಕೆ ಜಗದಂಬೆ ನಮೊ ಎಂಬೆ !
ಬನವೆ ತಿಂತಿಣಿಗಟ್ಟಿ ನಿನ್ನ ಪಾದಕ್ಕೆ ಉಧೋ ಉಧೋ ಎನ್ನುತಿದೆ !
ಹೃದಯ ತುಂಬಿ ಹಬ್ಬಿರುವ ತಮುವ ಕಳೆಯೆ !
ಮುದವ ತುಂಬುವ ಆತ್ಮಜ್ಯೋತಿಯನು ಬೆಳಗೆ !
ತುಳಿದು ಕ್ರುದ್ಧರನು, ಎತ್ತು ಬಡಬದ್ದರನು ಸಿದ್ಧಬುದ್ಧರನು ಹುಟ್ಟಿಸೇಳು, ಏಳು ತಾಯಿ !
ಓ ಮಹಾಸರಸ್ವತಿಯೆ, ಶೃಂಗೇರಿ ಶಾರದೆಯೆ
ಶೃಂಗಗಿರಿ ಇಳಿದು ಬಾ ತಾಯಿ ಕನ್ನಡದ ದೇವಿ
ಲೆಕ್ಕಣಿಕೆ ಬಿಟ್ಟೆಂದು ಕೂಸಿಯ ಕೊಡು ತಾಯಿ
ನಮ್ಮಲಸ ವಿಲಾಸವನು, ಭೋಗದಾಹವನು
ನೀಗಿಸಮ್ಮ ತ್ಯಾಗಯೋಗವನೊರೆದು
ಓ ವಂಶ್ರ ಮಾತೆ, ಶಕ್ತಿದಾತೆ, ನಾವು ಬರಿ ಯಂತ್ರಗಳು, ನೀನು ಯಂತ್ರಿ ರೂಢೆ
ನಮ್ಮ ನಿಯಂತ್ರಿಸು, ತಾಯಿ ಬ್ರಹ್ಮಾಣಿ!

[ಶ್ರೀ ದೊಡ್ಡಮೇಟಿ ಅಂದಾನಪ್ಪನವರು ರಚಿಸಿರುವ 'ಪ್ರಾರ್ಥನೆ' ಯ ೫ ನುತ್ತ ೬ ನೇ ಪದ್ಯಗಳವು]

ಕ್ಷಯರೋಗ ನಿವಾರಣೆ

(ಪಂಡಿತ ಕೆ. ಪಿ ಪುರಾಣಿಕ)

ಭಾರತದ ಆರೋಗ್ಯ ಮಂತ್ರಿಗಳು ರೇಡಿಯೋ ಭಾಷಣವನ್ನು ಮಾಡುತ್ತಾ ಕ್ಷಯ ರೋಗ ನಿವಾರಣಾ ಕಾರ್ಯದಲ್ಲಿ ಸಂಕಾಂದವರು ತೀವ್ರ ಆಸಕ್ತಿಯಿಂದ ಇರುವುದಾಗಿಯೂ, ಬಿ ಸಿ ಜಿ ಚುಚ್ಚುವುದು ಕ್ಷಯ ರೋಗದ ಆಸ್ಪತ್ರೆಗಳನ್ನು ಹೆಚ್ಚಿಸುವುದು ಇತ್ಯಾದಿ ಕಾರ್ಯಕ್ರಮಗಳು ನಡೆಯುತ್ತಿವೆಯೆಂದೂ ಹೇಳಿದರು ಜನಗಳ ರೋಗ ನಿವಾರಣಾ ಕಾರ್ಯದಲ್ಲಿ ಸರಕಾಂದವರು ಆಸಕ್ತಿ ವಹಿಸದೇ ಹೋದರೆ ಇನ್ಯಾರು ಮಾಡಬೇಕು !

ಜನಗಳು ಬಡತನದಿಂದ ನರಳುತ್ತಾ ಇದ್ದು ಸಾಕಷ್ಟು ಸರಿಯಾದ ಆಹಾರ ವಿಲ್ಲದಿರುವುದರಿಂದಲೂ, ಕಾಫಿ, ಟೀ, ಸಿನಿಮಾ ಇತ್ಯಾದಿಗಳ ದುಃಭ್ಯಾಸವು ಜನಗಳಲ್ಲಿ ಹೆಚ್ಚುತ್ತಾ ಇರುವುದರಿಂದಲೂ ಪಾಶ್ಚಾತ್ಯ ಚಿಕಿತ್ಸಾ ಪದ್ಧತಿಯ ಪ್ರಭಾವವಾಗಿಯೂ ಭಾರತದಲ್ಲಿ ಕ್ಷಯರೋಗವು ಬೆಳೆಯುತ್ತಾ ಬಂದಿದೆ ; ಈ ರೋಗದ ನಿವಾರಣೆಗೆ ಮುಖ ಕಾರಣಗಳನ್ನು ಪರಿಹರಿಸುವುದು ಅಗತ್ಯವೇ ಹೊರತು ಬಿ ಸಿ ಜಿ ಚುಚ್ಚುವುದರಿಂದಾಗಲೀ, ಆಸ್ಪತ್ರೆಗಳನ್ನು ಹೆಚ್ಚಿಸುವುದರಿಂದಾಗಲೀ ಕ್ಷಯ ರೋಗ ನಿವಾರಣೆಯು ಫಲಕಾರಿಯಾಗದು ; ಮೂಲ ಕಾರಣಗಳನ್ನು ನಿವಾರಣೆ ಮಾಡಿದರೆ ಆಸ್ಪತ್ರೆಗಳಿಗೂ ವ್ಯಾಕ್ಸಿನ್‌ಗಳಿಗೂ ಹಣವನ್ನು ವೆಚ್ಚಮಾಡಬೇಕಾಗಿಲ್ಲ.

ಕೇಂದ್ರ ಆರೋಗ್ಯ ಮಂತ್ರಿಗಳು ಇಂಗ್ಲೆಂಡಿನಲ್ಲಿದ್ದಾಗ ಅಲ್ಲಿಯ ಔಷಧ ನಿರ್ಮಾಪಕರೆಲ್ಲರೂ ಸೇರಿ ಮಂತ್ರಿಗಳಿಗೊಂದು ಸತ್ಕಾರ ಕೂಟವನ್ನು ಮಾಡಿದರು ; ಅವರು ತಯಾರಿಸಿದ ಔಷಧಗಳಿಗೆಲ್ಲಾ ಗಿರಾಕಿಗಳನ್ನು ಮಾಡಿಕೊಡುವುದಾಗಿ ನಮ್ಮ ಮಂತ್ರಿಗಳು ಭರವಸೆಯನ್ನಿದ್ದಾರೆ ; ಆದುದರಿಂದ ಭಾರತದ ಜನಗಳ ಕ್ಷಯ ರೋಗ ನಿವಾರಣೆಯಲ್ಲಿ ತೀರ್ಮಾನಕ್ಕೆ ಹಟ್ಟಿದೆ.

ಕಾಶ್ಮೀರವನ್ನು ಎರಡು ಭಾಗವಾಗಿ ಮಾಡಬೇಕು ?

ಪ್ರಮುಖ ಸುದ್ದಿಗಳು

ನವದೆಹಲಿಯಲ್ಲಿ ಭಾರತ ನಿಮ್ನ ವರ್ಗದ ಅಧ್ಯಕ್ಷ ರಾಜಭೋಜರು ಹೇಳಿಕೆ ಇತ್ತು ಕಾಂಗ್ರೆಸ್ ರಾಜ್ಯಭಾರದಿಂದ ಆಗಿರುವ ರಾಷ್ಟ್ರದ ಅಧೋಪತನವನ್ನು ತಡೆಯಲು ತಮ್ಮ ಪಕ್ಷ ಕಾರ್ಯೋನ್ಮುಖವಾಗುವದೆಂದಿರುವರು.

ಹೈದರಾಬಾದಿನಲ್ಲಿ ಫರ್ಕ್ಯೂ-ಜಿರ್ಗಾ ಇ-ಹಿಂದಿನ ಅಧ್ಯಕ್ಷ ಅಕ್ಬರ್ ಖಾನರು ಮೊನ್ನೆ ಹೇಳಿಕೆಯಿತ್ತು ಪಠಾಣರ ಪ್ರಗತಿಗೆ ಸ್ವತಂತ್ರ ಪಠಾಣಿಸ್ಥಾನ ಅಗತ್ಯವೆಂದಿರುವರು

ಬೆಂಗಳೂರಿನಲ್ಲಿ ಮೊನ್ನೆ ಮೊನ್ನೆ ಸೆರ್ವೆ ಸೌದೆ ಸಾಗಿಸಿಕೊಂಡು ರಾತ್ರಿವೇಳೆ ರಹದಾರಿಯಿಲ್ಲದೆ ಲಾರಿ ಓಡಿದ್ದನ್ನು ಪೋಲೀಸರು ಪತ್ತೆ ಮಾಡಿದ್ದಾರೆ ಅದೆ ಲಾರಿಯಲ್ಲಿ ಸೌದೆ ಇಲಾಖೆಯ ಇಬ್ಬಸ್ಪೆಕ್ಟರು ಕುಳಿತಿದ್ದರಂತೆ !

ಬೆಂಗಳೂರು, ಕೋಲಾರ, ತುಮಕೂರು ಜಿಲ್ಲಾಧಿಕಾರಿಗಳನ್ನು ಮಹಾರಾಜರು ಕರ್ಸಿ ಆಹಾರ ಪರಿಸ್ಥಿತಿ ಕುರಿತು ಚರ್ಚಿಸಿ, ಸೂಕ್ತ ಪರಿಹಾರ ಒದಗಿಸಬೇಕೆಂದು ತಿಳಿಸಿದರು.

ಚುನಾವಣಾ ಘೋಷಣೆ

ಅಖಿಲ ಭಾರತ ನಿಮ್ನ ವರ್ಗ ಸಂಸ್ಥೆ ಚುನಾವಣಾ ಘೋಷಣೆ ಪ್ರಕಟಿಸಿದೆ. ಹಿಂದೂಗಳು ಹೆಚ್ಚಿರುವ ಭಾಗವನ್ನು ಹಿಂದೂಗಳಿಗೂ, ಮುಸ್ಲಿಮರು ಹೆಚ್ಚಾಗಿರುವ ಭಾಗವನ್ನು ಪಾಕಿಸ್ತಾನಕ್ಕೂ ಕಾಶ್ಮೀರವನ್ನು ವಿಭಜಿಸಿ ಹಂಚಬೇಕೆಂದೂ ಆ ಸಂಸ್ಥೆ ಒತ್ತಾಯಮಾಡಿದೆ ಆ ಸಂಸ್ಥೆ ಪಾಸಪ್ರತಿಬಂಧಕವನ್ನು ವಜಾ ಮಾಡುವದಾಗಿ ತಿಳಿಸಿದೆ.

ಒಪ್ಪಂದ ರದ್ದು

ಬ್ರಿಟಿಷ್-ಈಜಿಪ್ಷಿನ ಒಡಂಬಡಿಕೆಯನ್ನು ಈಜಿಪ್ಟು ರದ್ದುಗೊಳಿಸಿದ್ದರ ವಿಷಯದಲ್ಲಿ ಈಜಿಪ್ಷಿನ ಜನತೆ ತೀವ್ರ ಆನಂದ ಭರಿತರಾಗಿರುವರು. ಕೈರೋ ಮತ್ತಿತರ ಸ್ಥಳಗಳಲ್ಲಿ ಶಾಂತಿಭಂಗವಿಲ್ಲದೆ ಪ್ರದರ್ಶನಗಳಾದವು.

ಸಮಾನ ಸ್ಥಾನ

ಮಧ್ಯಪ್ರಾಚ್ಯದ ರಕ್ಷಣಾ ವ್ಯವಸ್ಥೆಯಲ್ಲಿ ಈಜಿಪ್ಟಿಗೆ ಸರಿಸಮಾನ ಸ್ಥಾನ ಕಲ್ಪಿಸುವದಾಗಿ ಕೈರೋ ವಾರ್ತೆ.

ಶಾಸನ ಸಭೆ

ಮೈಸೂರು — ಶಾಸನ ಸಭೆಯ 2 ನೇ ದಿನದ ಕಾರ್ಯಕಲಾಪಗಳು ಕ್ರಾಫರ್ಡ್ ಭವನದಲ್ಲಿ ಈ ಮಧ್ಯಾಹ್ನ 12 ಗಂಟೆಗೆ ಪ್ರಾರಂಭವಾಯಿತು.

— ವಿಶ್ವ ಕುಟುಂಬಿ ಬಾಪೂ —

ಬಾಪು ವಿಶ್ವಕುಟುಂಬಿಯಾಗಿದ್ದರು : ಅವರಿಗೆ ಎಲ್ಲರೂ ಬೇಕು ; ಎಲ್ಲವೂ ಬೇಕು ; ಅವರ ವ್ಯವಹಾರ ನಿತ್ಯ ಶತಾವಧಾನಿದಂತೆ. ಹತ್ತು ನಿಟ್ಟಿಗೆ ದಶರಥ ಚಕ್ರವರ್ತಿ ತನ್ನ ರಥ ಓಡಿಸುತ್ತಿದ್ದನಂತೆ ; ಅದೂ ಒಂದು ಪರಾಕ್ರಮವೇ. ಬಾಪೂ ಕೋಟಿ ದಿಕ್ಕಿನಲ್ಲಿ ತನ್ನ ಮನಸ್ಸನ್ನು ಹರಿಸುತ್ತಿದ್ದರು : ಕೋಟಿ ಸಂಬಂಧ ಬೆಳೆಸುತ್ತಿದ್ದರು ; ಅವರು ದಿನ ಬೆಳಗಾಗ ಗಾಳೀ ಸಂಚಾರ ಹೊರಡುತ್ತಿದ್ದರು : ಅವರ ಹಿಂದೆ ಆಗ ಹತ್ತಾರು ಮಂದಿ ಇರುತ್ತಿದ್ದರು ದಿನವೂ ಪ್ರಪಂಚದ ನಾನಾ ಮೂಲೆಗಳಿಂದ ಜನ ನೋಡಲು ಬರುತ್ತಿದ್ದರು ; ಒಬ್ಬೊಬ್ಬರದು ಒಂದು ಸಮಸ್ಯೆ; ಎಲ್ಲರಿಗೂ ಸಾವಧಾನವಾದ ಸಮಾಧಾನ ಹೇಳುತ್ತಿದ್ದರು.

ಹಿಂದೆ ಒಮ್ಮೆ ಚೀನಾ ದೇಶದ ಪ್ರತಿನಿಧಿಯಾಗಿ ತೈ ಚಿ ತೌ ಸೇವಾಗ್ರಾಮಕ್ಕೆ ಬಂದಿದ್ದರು ; ಗಾಂಧೀಜಿ ಅವರಿಗೂ ಅವರೊಡನೆ ಬಂದಿದ್ದವರಿಗೂ ಖಾದೀ ಅಹಿಂಸೆ ಸಂದೇಶಗಳನ್ನು ಹೇಳಿದರು ; ಹೊರಟು ಬರುವಾಗ ತೈ ಜಿ ತೌ ಗಾಂಧೀಜೀಗೆ ದೀರ್ಘಾಯುವನ್ನು ಕೋರಿದರು.

' ಚೀನದ ಯೋಗಕ್ಷೇಮಕ್ಕಾಗಿ, ಹಿಂದೂಸ್ಥಾನದ ಯೋಗಕ್ಷೇಮಕ್ಕಾಗಿ ನಿಮಗೆ ದೀರ್ಘಾಯುವಿರಲಿ ಎಂದು ಬೇಡುತ್ತೇನೆ ' ಎಂದರು.

ಗಾಂಧೀಜೀ ನಗುತ್ತಾ ' ನನ್ನ ಕುಟುಂಬ ದೊಡ್ಡದು : ೩೫ ಕೋಟಿ ಜನರಂದು ' ಎಂದರು ತೈ ಚಿ ತೌ ಮುಂದುವರಿಸಿ ' ಏಕೆ, ಇಡೀ ಮಾನವ ಕೋಟಿಯೇ ನಿಮ್ಮ ಕುಟುಂಬ ' ಎಂದರು.

' ನಿಜ, ಈ ೩೫ ಕೋಟಿ ಕುಟುಂಬದ ಯೋಗಕ್ಷೇಮವನ್ನು ನಾನು ಹೊರೆಟಲ್ಲೆನಾದರೆ. ನೀವು ಹೇಳಿದಹಾಗೂ ಆದೀತು ' ಎಂದರು ಗಾಂಧೀಜೀ.

ಗಾಂಧೀಜಿಯ ಉದಾತ್ತ, ಹಿರಿಯ ಮನಸ್ಸು ಎಲ್ಲೆ ವಿಸ್ತರಿಸುದಾಗಿತ್ತು ; ಅವರ ಪ್ರೀತಿ ವಿಶ್ವವ್ಯಾಪ್ತಿಯಾಗಿತ್ತು.

— ಶುಭಾ

ಮೈಸೂರು ವರ್ತಮಾನ

ಸಿಲೋನಿನವರಿಂದ ಉಪದೇಶ ಭಾಷಣ

ಸಿಲೋನ್ ವಿಶ್ವವಿದ್ಯಾನಿಲಯದ ಉಪ-ಕುಲಪತಿಯವರಾದ ಸರ್ ಐವಾನ್ ಜೆಂಕಿನ್ಸ್‌ರನ್ನು ಡಿಸೆಂಬರ್ ತಿಂಗಳಿನಲ್ಲಿ ನಡೆಯುವ ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಭಾಷಣ ಮಾಡಲು ಆಹ್ವಾನಿಸಲಾಗಿದೆ

— ಮೈಸೂರು ದಸರಾ ವಸ್ತುಪ್ರದರ್ಶನ ತಾ|| 21 ನೇ ಭಾನುವಾರ ಸಮಾಪ್ತವಾಗಲಿದೆ.

ಅವಕಾಶಹೀನರಿಗೆ ಹಿಂತೋಕ್ತಿ

ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಕೆ ಹನುಮಂತಯ್ಯನವರು ಪತ್ರಿಕೆಯವರೊಂದಿಗೆ ಮಾತನಾಡಿ ತಾ||, ಮಹಾ ಚುನಾವಣೆಗೆ ಅಂಗೀಕೃತರಾಗದ ಅರ್ಜಿದಾರರು ನಿರಾಶರಾಗದೆ ಕಾಂಗ್ರೆಸಿನ ಗೆಲುವಿಗೆ ಬೆಂಬಲ ಕೊಡಬೇಕೆಂದು ತಿಳಿಸಿದ್ದಾರೆ

— ನಿನ್ನೆ ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷರು ಚುನಾವಣಾ ಪಟ್ಟಿಯೊಡನೆ ದೆಹಲಿಗೆ ಹಾರಿದರು. ಸಂಗಡ ಕಾಂಗ್ರೆಸಿನ ಸಹ ಕಾರ್ಯದರ್ಶಿ ಶ್ರೀ ಹುಚ್ಚು ಮಾಸ್ತಿಯವರಿದ್ದಾರೆ.

Kann. (Eng. 478)

ನ್ಯೂಗಿನಿಯಾದಲ್ಲಿ ಕುಷ್ಠರೋಗ

ಉಷ್ಣವಲಯದಲ್ಲಿ ಅನೇಕಾನೇಕ ಅಪಾಯಕರ ಖಾಯಿಲೆಗಳು ಅಗಿಂದಾಗ್ಗೆ ಬರುವುದು ಸರ್ವಸಾಧಾರಣವಾಗಿದೆ : ಈ 20 ನೇ ಶತಮಾನದಲ್ಲಿ, ಔಷಧ ವಿಜ್ಞಾನವು ಅಷ್ಟು ಅಭಿವೃದ್ಧಿಗೊಂಡಿರುವ ಈ ಯುಗದಲ್ಲಿ, ಅನೇಕ ದೇಶದೇಶಗಳಲ್ಲಿ ಇನ್ನೂ ಹಲವಾರು ಸಾಂಕ್ರಾಮಿಕ ಜಾಡ್ಯಗಳು ಹೇರಳವಾಗಿವೆ.

ಮಾನವನಿಗೆ ಬರಬಹುದಾದ ಅತಿ ಕೀಳು ಜಾಡ್ಯವಾದ ಕುಷ್ಠರೋಗವು ಬಹುಕಾಲದಿಂದಲೂ ಇರುವುದು. ಈ ರೋಗವು ಅತಿ ಸಾಂಕ್ರಾಮಿಕವಾಗಿದು ಅದರಿಂದ ನರಳುವವರು ಇತರರಿಂದ ಪ್ರತ್ಯೇಕವಾಗಿ ವಾಸಿಸಬೇಕಾದಷ್ಟು ಭಯಂಕರವಾಗಿದೆ. ನ್ಯೂಗಿನಿಯಾದ ತೀರದ ಒಂದು ಸಣ್ಣ ದ್ವೀಪದಲ್ಲಿ ಇಂತಹ ಐವತ್ತು ಮಂದಿ ವಾಸಿಸುತ್ತಿದ್ದಾರೆ ; ಈ ದ್ವೀಪದಲ್ಲಿ ಕೇವಲ ಒಬ್ಬರೇ ಒಬ್ಬರು ಆರೋಗ್ಯಶಾಲಿಗಳಿರುವರು ; ಅವರ್ಯಾರೆಂದರೆ, ಮಾನವನನ್ನು ಹಿಂಸಿಸುತ್ತಿರುವ ಈ ಭಯಂಕರ ವ್ಯಾಧಿಯಿಂದ ನರಳುತ್ತಿರುವ ರೋಗಿಗಳಿಗೆ ಔಷಧೋಪಚಾರ ನಡೆಸಲು ಇರುವ ಒಬ್ಬ ಯುವಕ ಡಾಕ್ಟರು

ಮಾನವ ಸೇವೆಗೆ ತಮ್ಮ ಜೀವವನ್ನು ಧಾರೆ ಎರೆಯುತ್ತಿರುವವರು ಇವರೊಬ್ಬರೇ ಅಲ್ಲ ; ಅತನ ಹಿಂದೆ ಎಷ್ಟೋ ಮಂದಿ ಇದ್ದರು ; ಮತ್ತು ಇಂದು ಅನೇಕ ವಿಜ್ಞಾನಿಗಳು ಸಾಂಕ್ರಾಮಿಕ ರೋಗಗಳನ್ನು ನಾಶಮಾಡಲು ತಮ್ಮ ಜೀವಿತವನ್ನು ಕಳೆಯುತ್ತಿರುವರು

ವರ್ಷಾಕಾಲದ ಸಂಶೋಧನೆಯಲ್ಲಿ ಕ್ವಿನೈನು ಮೂಲಕ ಮಲೇರಿಯಾವನ್ನು ಎದುರಿಸುವುದೊಂದಾಗಿದೆ : ಈ ಕಾರ್ಯಕ್ರಮವು ಎಲ್ಲ ಉಷ್ಣ ಪ್ರದೇಶಗಳಲ್ಲಿ ಆಚರಿಸಲಾಗುತ್ತಿದೆ.

ಈ ಸಂದರ್ಭದಲ್ಲಿ, 1938 ರಲ್ಲಿ ಮಾಜಿ ಲೀಗ್ ಆಫ್ ನೇಷನ್ಸಿನ ನಿಪುಣ ಮಲೇರಿಯಾ ಕಮಿಷನ್ನಿನ ವರದಿಯು ಅವಶ್ಯವಾದುದಾಗಿದೆ. ಮಲೇರಿಯಾ ಕಾಲದಲ್ಲಿ ಪ್ರತಿ ದಿನ 6 ಗ್ರೇನು ಕ್ವಿನೈನು ಮತ್ತು ಮಲೇರಿಯಾ ತಗುಲಿದಾಗ 5-7 ದಿನಗಳ 15 ರಿಂದ 20 ಗ್ರೇನು ಕ್ವಿನೈನು ಸೇವನೆಯು ಪರಿಣಾಮಕಾರಿಯಾದ ಮಲೇರಿಯಾ ಪ್ರತಿಬಂಧಕವೂ, ಔಷಧವೂ ಆಗಿರುವುದೆಂದು ಈ ವಿಶೇಷ ವಿಜ್ಞಾನಿಗಳು ನಿರ್ಧರಿಸಿದ್ದಾರೆ.

ಅಪೇರ—

ಅಮೋಘ 3 ನೇ ವಾರ

ಸರ್ವಾಧಿಕಾರಿ

ಮಹೋನ್ನತ ತಮಿಳು ಚಿತ್ರ

ಪಾತ್ರ — ಅಂಜಲಿದೇವಿ, ನಾಗಯ್ಯ, ರಾಮಚಂದ್ರಕ್, ಸಂಭಿಯಾರ್

ಪ್ರತಿ ದಿನ 3 ಆಟಗಳು

ಬೆಳಿಗಿನ ಪ್ರದರ್ಶನ 19-10-51 ರಿಂದ

ಸಿಂಗಾರ್ (ಹಿಂದಿ)

ರಣಜಿತ್

ಕೀರ್ತಿಯುತ 3 ನೇ ವಾರ

ಶಬಿನ್ತಾನ್

ಮನಮೋಹನ ಹಿಂದಿ ಚಿತ್ರ

ಪಾತ್ರ: ಶಾಂ, ನಸೀಂ, ಸಪ್ರೂ, ಕಕ್ಕೂ

ಪ್ರತಿ ದಿನ 3 ಆಟಗಳು

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು

ಈಗ ಯಶಸ್ವಿಯಾಗಿ ನಡೆಯುತ್ತಿದೆ — ಪ್ರತಿ ದಿನ 3 ಆಟಗಳು

ಚಾಮುಂಡೇಶ್ವರಿ ಮತ್ತು ಗಣೇಶ ಟಾಕೀಸುಗಳಲ್ಲಿ

ಸುಖಸಂಪತ್ ಚಿತ್ರಪಥದವರ ಸುಂದರ ಪೌರಾಣಿಕ ಚಿತ್ರ

ತಿಲೋತ್ತಮೆ (ಕನ್ನಡ)

ಭೂಮಿಕೆ— ಜಯಶ್ರೀ, ಜಿ. ಆರ್. ಸ್ವಾಮಿನಾಥನ್, ಕಲಾವಿಶಾರದ ಕೊಟ್ಟೂರಪ್ಪ

— SUKH SAMPATH CHITRAPAT Release

ಉಡ್‌ಲಾಂಡ್

ಶಿಸ್ತು

ಜನಪ್ರಿಯ 2 ನೇ ವಾರ

ಪ್ರತಿ ಸಂಸಾರವೂ ನೋಡಲೇಬೇಕಾದ

ಅಮೋಘ ಪೌರಾಣಿಕ ಹಿಂದಿ ಚಿತ್ರ

ಶ್ರೀ ಗಣೇಶ ಜನ್ಮ

ನಿರೂಪ ರಾಯ್, ತ್ರಿಲೋಕ್ ಕಪೂರ್

ಪ್ರತಿ ದಿನ 3 ಪ್ರದರ್ಶನಗಳು



Protect the Cow

Edited, Printed and Published by Dharma Prachara Nirata M. S. Krishna Rao. at the Satyavadi Press Chamrajpuram Mysore